CENTRAL UNIVERSITY OF KARNATAKA



# Central Library

Central University of Karnataka, Kalaburgi

**Good Morning CUK !**

# News Headings

- Education
- Science & Technology
- Nutrition and Health
- Business, Finance & Marketing
- Economic News
- Event and Celebration
- Art & Architecture
- Sports & Cultural
- Editorial News

# EDUCATION

# At 220, DU India's top campus in QS sustainability rankings

Manash.Gohain
@timesgroup.com

**New Delhi**: Ranked 220th globally, Delhi University is at the top among Indian universities in the "QS World University Rankings: Sustainability 2024," which features 1,397 institutions across 95 countries. DU is the only Indian entity in the top 300, as IITs from Bombay, Madras, Kharagpur and Roorkee are ranked among the top 400.

The University of Toronto is named the world's most sustainable university, followed by the University of California, Berkeley (UCB) in second and the University of Manchester in third place.

While DU scored high in offering world-class education in environmental and climate-related subjects, it faces challenges in diversity, inclusivity and support and quality of life. Fifty-six Indian institutions made it to the ranking and 22 higher education institutions are in the top 700. DU has been ranked 220th globally and 30th in Asia.

There is no Indian university in the top 100. IIT-Bombay bagged the 303rd rank & IIT-Madras 344. Indian Institute of Science, Bangalore, which has been one of the top performers in the World University Rankings for India, is ranked 505 in the list. The ranking was prepared based on three parameters — environmental impact, social impact, and governance.

**QS UNIV RANKINGS**

**INDIA'S TOP 10**

| 2024 Rank | Institution |
|---|---|
| 220 | University of Delhi |
| 303 | IIT-Bombay |
| 344 | IIT-Madras |
| 349 | IIT-Kharagpur |
| 387 | IIT-Roorkee |
| 426 | IIT-Delhi |
| 444 | BITS Pilani |
| 449 | Vellore Institute of Technology |
| 496 | Anna University |
| 505 | Indian Institute of Science |

# Recruiters scout for niche tech skills in IIT campuses

## Students with regular profiles in less demand as companies hire for complex projects

Devina Sengupta
devina.sengupta@livemint.com
MUMBAI



Recruiters say the demand from the market is for engineers who can don more of a consulting role and also be armed with digital skills that go beyond coding. MINT

Zomato is scouting for algorithm engineers at IIT campuses. High frequency trading companies are looking for statistical process control experts with high scores in quant. Consulting companies want associate product managers. And conglomerates are seeking chemical engineers for their ESG operations.

Recruiters prowling the premier engineering schools at this year's hiring season are shunning students with the regular academic profiles, instead picking to-be-engineers who have worked in complex projects. Blame AI.

"If we wanted regular coders, engineers, or get impressed with presentations, we would have relied on ChatGPT," said a partner at a leading consulting company that has hired more than 10 students from the Indian Institutes of Technology at Mumbai, Delhi, Kharagpur, and Kanpur.

"We are looking at students who can run complex projects and work in operations that require them to bring more than one skill set," the partner said.

The campus hiring season this year began on 1 December.

Placements offices across the IITs said food-delivery platform Zomato was seeking out algorithm engineers and students with a combination of software developer, machine-learning and data science chops.

Ride-hailing and electric vehicle maker Ola is targeting students familiar with autonomous technologies, artificial intelligence, machine-learning, silicon design, vehicle engineering, and research experience in cell development.

The demand is for engineers who can do more of a consulting role as well as be armed with digital skills beyond coding, say recruiters.

"Companies are figuring out which roles will get automated... they will not hire from IITs for profiles that will become redundant," said Sunil Chemmankotil, chief executive at staffing firm TeamLease Digital. "For algorithm engineers with work experience, candidates from the job markets are offered Rs20-45 lakh."

In comparison, engineers from tier 2 and 3 colleges ready with coding skills get paid Rs4-8 lakh per annum.

Quant firms, known to offer salaries exceeding Rs1 crore, are stressing on higher levels of maths and statistical modelling, say students who are part of the placement cells at the IITs. But "modelling scenarios are tough and not many are qualified for these roles," said a student at IIT-Delhi.

High-frequency trading (HFT) firms and quant companies employ quantitative analytics and algorithms to predict global market movements. HFT companies have been garnering attention at a time when global markets are going through crests and troughs. So far during this year's IIT placements, such companies including Quadeye, Graviton Research Capital, Maverick Derivatives, Da Vinci, and Quantbox Research have offered a few roles outside India as well, including in the US, the UK, Singapore, and Hong Kong.

Then there are companies looking at green energy profiles.

"EV makers, battery companies, and conglomerates such as Reliance Industries are coming to campus for their new energy business units," said a person who is part of the placements team at one of the top three IITs. Reliance Industries Ltd, for instance, is offering about Rs15 lakh in annual pay for its new energy business, this person said.

### FOCUSED SEARCH

**ZOMATO** looked to hire students with skills in software development, ML, and data science

**OLA** wanted skills in AI, ML, autonomous technologies, silicon design, vehicle engg, and cell R&D

**QUANT** firms are stressing on higher levels of math and statistical modelling

**COMPANIES** look to not hire from IITs into profiles that are likely to become redundant

# ಪಿಯು ತರಗತಿಗೆ ಗಣಿತ ಲ್ಯಾಬ್‌ಗಳ ಕೊರತೆ

## ಮತ್ತೆ ಪ್ರಸ್ತಾವನೆ ಸಲ್ಲಿಸಲು ಫೋರಂ ಸಿದ್ಧತೆ | ಸ್ಪರ್ಧಾತ್ಮಕ ಕಲಿಕೆಗೆ ಲ್ಯಾಬ್ ಅಗತ್ಯ

■ **ಆದರ್ಶ ಕೋಡಿ** ಬೆಂಗಳೂರು ಗ್ರಾ.
adarshkodi15@gmail.com

ಪಿಯು ಶಿಕ್ಷಣದಲ್ಲಿ ವಿಜ್ಞಾನ ವಿಭಾಗದ ಗಣಿತ ವಿಷಯಕ್ಕೆ ಲ್ಯಾಬ್ ಆರಂಭಿಸಬೇಕೆಂಬ ಕೂಗಿಗೆ ಇನ್ನೂ ಮಾನ್ಯತೆ ದೊರೆತಿಲ್ಲ. ಹೀಗಾಗಿ ಗಣಿತ ಲ್ಯಾಬ್ ಆರಂಭಕ್ಕೆ ಮತ್ತೆ ಪ್ರಸ್ತಾವನೆ ಸಲ್ಲಿಸಲು ಗಣಿತ ಫೋರಂ ಸಿದ್ಧತೆ ಮಾಡಿಕೊಳ್ಳುತ್ತಿದೆ.

ರಾಜ್ಯದಲ್ಲಿ ಪಿಯು ವಿಜ್ಞಾನ ವಿಭಾಗಕ್ಕೆ ಹಲವು ವರ್ಷಗಳ ಹಿಂದೆಯೇ ಎನ್‌ಸಿಇಆರ್‌ಟಿ ಪಠ್ಯಕ್ರಮ ಅಳವಡಿಸಿಕೊಳ್ಳಲಾಗಿದೆ. ಆದರೆ ಪ್ರಥಮ ಹಾಗೂ ದ್ವಿತೀಯ ಪಿಯುಸಿಗೆ ಗಣಿತ ಪ್ರಾಯೋಗಿಕ ಪರೀಕ್ಷೆ ಆರಂಭವಾಗಿಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಗಣಿತ ವಿಷಯದ ಪ್ರಾಯೋಗಿಕ ವಿಷಯ ಕಲಿಕೆಗೆ ಅವಕಾಶ ಇಲ್ಲದಂತಾಗಿದೆ. ಪ್ರಾಯೋಗಿಕ ಪರೀಕ್ಷೆಯಿಲ್ಲದ ಎಲ್ಲಾ ವಿಷಯದಲ್ಲೂ ಲಿಖಿತ 80, ಆಂತರಿಕ 20 ಅಂಕಗಳ ಪರೀಕ್ಷಾ ಮಾದರಿ ಆರಂಭಿಸಲಾಗಿದೆ. ಆದರೆ ಇದರಲ್ಲಿ ಚಟುವಟಿಕೆಗಳಿಗೆ ಮಾತ್ರ ಅಂಕ ನೀಡಲಾಗುತ್ತಿದೆ. ಆದರೆ ಗಣಿತ ಲ್ಯಾಬ್ ಆರಂಭದ ಬಗ್ಗೆ ಯಾವುದೇ ಸುಳಿವು ನೀಡಿಲ್ಲ.

> **ಮಹಾರಾಷ್ಟ್ರ ಸೇರಿದಂತೆ ಅನೇಕ ರಾಜ್ಯದಲ್ಲಿ ಈಗಾಗಲೇ ಗಣಿತ ಪ್ರಾಯೋಗಿಕ ತರಗತಿಗಳ ಅಂಕ ಪರಿಗಣಿಸಲಾಗುತ್ತದೆ. ಆದ್ದರಿಂದ ಇಲ್ಲೂ ಲ್ಯಾಬ್‌ಗೆ ಪ್ರಸ್ತಾವನೆ ಸಲ್ಲಿಸಲಾಗುವುದು.**
>
> **-ಎಸ್.ಆರ್.ವೆಂಕಟೇಶ್**
> ಅಧ್ಯಕ್ಷ, ರಾಜ್ಯ ಪಿಯು ಗಣಿತ ಫೋರಂ

**ಕಲಿಕೆಗೆ ಅನುಕೂಲ:** ಈಗಾಗಲೇ ಪಿಯು ವಿಜ್ಞಾನ ವಿಭಾಗದಲ್ಲಿರುವ ಭೌತಶಾಸ್ತ್ರ ರಸಾಯನಶಾಸ್ತ್ರ, ಜೀವಶಾಸ್ತ್ರ, ಗಣಕ ವಿಜ್ಞಾನ ವಿಷಯಗಳಿಗೆ 70 ಅಂಕದ ಲಿಖಿತ ಪರೀಕ್ಷೆ ಹಾಗೂ 30 ಅಂಕದ ಪ್ರಾಯೋಗಿಕ ಪರೀಕ್ಷೆ ಸ್ವರೂಪದಲ್ಲಿ ನಡೆಯುತ್ತಿದೆ. ಆದರೆ ಈವರೆಗೂ ಗಣಿತ ಮಾತ್ರ 100 ಅಂಕಗಳ ಲಿಖಿತ ಪರೀಕ್ಷೆ ಬರೆಯಬೇಕಿತ್ತು. ಇದರಿಂದ ಗಣಿತ ವಿಷಯದ ಅಂಕ ಗಳಿಕೆ ಮೇಲೂ ಪರಿಣಾಮ ಬೀರುತ್ತಿತ್ತು. ಆದಷ್ಟು ಬೇಗ ಗಣಿತ ವಿಷಯಕ್ಕೂ ಲ್ಯಾಬ್ ಆರಂಭಿಸಬೇಕೆಂದು ಗಣಿತ ಉಪನ್ಯಾಸಕರು ಮನವಿ ಮಾಡುತ್ತಿದ್ದಾರೆ.

### ಏನೇನು ಅನುಕೂಲ?

- ಪ್ರಾಯೋಗಿಕ ಕಲಿಕೆ ವಿಷಯದ ಆಸಕ್ತಿ ಹೆಚ್ಚಿಸುತ್ತದೆ
- ಲ್ಯಾಬ್‌ನಿಂದ ಗಣಿತ ಫಲಿತಾಂಶ ಉತ್ತಮ ಸಾಧ್ಯ
- ಪದವಿ ಶಿಕ್ಷಣದಲ್ಲಿ ಗಣಿತ ಲ್ಯಾಬ್ ಇರುವುದರಿಂದ ಪಿಯು ಮಟ್ಟದಲ್ಲಿ ಲ್ಯಾಬ್ ಕಲಿಕೆ ಅಗತ್ಯ
- ಸ್ಪರ್ಧಾತ್ಮಕ ಯುಗದಲ್ಲಿ ಆಧುನಿಕ ತಂತ್ರಜ್ಞಾನದೊಂದಿಗೆ ವಿಷಯ ಕಲಿಕೆ ಉತ್ತಮ

## ರೂಬಿಕ್ಸ್ ಕ್ಯೂಬ್‌ನ ಚಿತ್ರ ಬಿಡಿಸಿದ ದೇಶದ ಏಕೈಕ ಶಾಲೆ

# ಸಿದ್ಧಿ ವಿನಾಯಕ ವಸತಿ ಶಾಲೆಗೆ ವಿಶ್ವ ದಾಖಲೆ ಗರಿ

**■ ವಿಜಯವಾಣಿ ಸುದ್ದಿಜಾಲ ಕುಂದಾಪುರ (ಉಡುಪಿ)**

ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯಲ್ಲಿ ನಾಲ್ಕು ದಿನಗಳಲ್ಲಿ ಎರಡು ವಿಶ್ವ ದಾಖಲೆ ಆಗಿದೆ. ರೂಬಿಕ್ ಕ್ಯೂಬ್ ಸ್ಪರ್ಧೆಯಲ್ಲಿ ದ್ವಿಮುಖ ಚಿತ್ರ, ಅತಿ ಹೆಚ್ಚು ಮಂದಿ ಭಾಗವಹಿಸಿದ ರೂಬಿಕ್ ಕ್ಯೂಬ್ ಚಿತ್ರ ಬಿಡಿಸಿದ ದೇಶದ ಏಕೈಕ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗುವ ಮೂಲಕ ಹಟ್ಟಿಯಂಗಡಿ ಶಾಲೆ ಹೆಸರು ವಿಶ್ವದೆತ್ತರಕ್ಕೆ ಏರಿದೆ.

ಹಟ್ಟಿಯಂಗಡಿ ಶ್ರೀ ಸಿದ್ಧಿ ವಿನಾಯಕ ವಸತಿ ಶಾಲೆ ರೂಬಿಕ್ ಕ್ಯೂಬ್‌ನಲ್ಲಿ ನಾಲ್ಕು ದಿನಗಳ ಅವಧಿಯಲ್ಲಿ ಎರಡು ವಿಶ್ವ ದಾಖಲೆ ನಿರ್ಮಿಸುವ ಮೂಲಕ ಗಿನ್ನೆಸ್ ಪುಸ್ತಕಕ್ಕೆ ಸೇರ್ಪಡೆಯಾಗಿದೆ. ಗಿನ್ನೆಸ್ ಸಂಸ್ಥೆ ಎಡ್ ಜ್ಯುಡಿಕೇಟರ್ ರಿಷಿನಾಥ್ ಭಾನುವಾರ ಅಧಿಕೃತ ಘೋಷಣೆ ಮಾಡಿ, ಸಂಸ್ಥೆಯ ಪ್ರಾಂಶುಪಾಲ ಎಚ್. ಶರಣ ಕುಮಾರ ಅವರಿಗೆ ಗಿನ್ನೆಸ್ ವಿಶ್ವ ದಾಖಲೆ ಪ್ರಮಾಣಪತ್ರ ಹಸ್ತಾಂತರಿಸಿದರು. ಸಂಸ್ಥೆ ಉಪಾಧ್ಯಕ್ಷ ಎಚ್.ಬಾಲಚಂದ್ರ ಭಟ್, ಆಡಳಿತಾಧಿಕಾರಿ ವೀಣಾರಶ್ಮಿ, ರಮಾದೇವಿ ಆರ್.ಭಟ್ ಹಾಗೂ ಗಿನ್ನೆಸ್ ದಾಖಲೆ ಮಾರ್ಗದರ್ಶಕ ಪೃಥ್ವೀಶ್.ಕೆ, ಉಪಪ್ರಾಂಶುಪಾಲ ರಾಮ ದೇವಾಡಿಗ ಸಾಧನೆಗೆ ಸಾಕ್ಷಿಯಾದರು. ಎರಡು ಗಿನ್ನೆಸ್ ದಾಖಲೆ ಮಾಡಿದ ಬ್ರಹ್ಮಾವರ ಪೇತ್ರಿಯ ಪೃಥ್ವೀಶ್ ಕೆ. ಒಂದೇ ಕೈಯಲ್ಲಿ ರೂಬಿಕ್ ಕ್ಯೂಬ್ ಸವಾಲು ನಿರ್ವಹಿಸಿ ಗಮನ ಸೆಳೆದುದು ಮತ್ತೊಂದು ವಿಶೇಷ. 1,228 ಮಂದಿ 1,300 ಕ್ಯೂಬ್‌ಗಳಲ್ಲಿ 7.755.625 ಚ.ಅಡಿ ಉದ್ದಳತೆ 42.78 ಚ.ಅಡಿ ವಿಸ್ತೀರ್ಣದಲ್ಲಿ ದಿ.ಎಚ್.ರಾಮ ಚಂದ್ರ ಭಟ್ ಅವರ ಚಿತ್ರ ಮೂಡಿಸಿದರು. ಯು.ಕೆ.ಯ ರೂಬಿಕ್ಸ್ ಬ್ರಾಂಡ್ ಲಿಮಿಟೆಡ್‌ನ 308 ಜನರು ಪಾಲ್ಗೊಂಡು ಮಾಡಿದ ರಚನೆಯ ದಾಖಲೆ ಮುರಿದು ಬಿತ್ತು.



**ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ಶಾಲೆಯಲ್ಲಿ ಗಿನ್ನೆಸ್ ವಿಶ್ವದಾಖಲೆ ಸಾಧನೆಯ ಪ್ರಮಾಣಪತ್ರವನ್ನು ಗಿನ್ನೆಸ್ ಸಂಸ್ಥೆ ಎಡ್‌ಜ್ಯುಡಿಕೇಟರ್ ರಿಷಿನಾಥ್ ವಿತರಿಸಿದರು. ಸಂಸ್ಥೆ ಪ್ರಾಂಶುಪಾಲ ಎಚ್.ಶರಣ ಕುಮಾರ, ಸಂಸ್ಥೆ ಉಪಾಧ್ಯಕ್ಷ ಎಚ್.ಬಾಲಚಂದ್ರ ಭಟ್, ಆಡಳಿತಾಧಿಕಾರಿ ವೀಣಾರಶ್ಮಿ, ರಮಾದೇವಿ ಆರ್.ಭಟ್, ಉಪಪಾಂಶುಪಾಲ ರಾಮ ದೇವಾಡಿಗ ಇದರು.**

**ಕಳೆದ ವರ್ಷದಿಂದಲೇ ತರಬೇತಿ:** ಕಳೆದ ವರ್ಷ ನವಂಬರ್‌ನಿಂದ ಮಕ್ಕಳಿಗೆ ರೂಬಿಕ್ ಕ್ಯೂಬ್ ಸವಾಲು ಬಿಡಿಸಲು, ಜೂನ್‌ನಿಂದ ಚಿತ್ರ ಬಿಡಿಸಲು ತರಬೇತಿ ನೀಡಲಾಗುತ್ತಿತ್ತು. 7,500 ಕ್ಯೂಬ್‌ಗಳನ್ನು ಸಮೀಪದ ಸರ್ಕಾರಿ ಕನ್ನಡ ಶಾಲೆಗಳಿಗೆ ಉಚಿತವಾಗಿ ನೀಡಿ ಅವರಿಗೆ ತರಬೇತಿ ನೀಡಲಾಗುವುದು. ಮೊಬೈಲ್‌ನಿಂದ ದೂರ ಇರಿಸಲು, ಏಕಾಗ್ರತೆಗೆ, ಮನೋ ಸಾಮರ್ಥ್ಯ ವೃದ್ಧಿಗೆ ಇದು ಸಹಕಾರಿ ಎಂದು ಶರಣ ಕುಮಾರ್ ಹೇಳಿದರು.

**ಎಲ್ಲ ಮಕ್ಕಳು ಒಟ್ಟಾಗಿ 4 ದಿನಗಳಲ್ಲಿ ಎರಡು ಗಿನ್ನೆಸ್ ವಿಶ್ವದಾಖಲೆ ನಿರ್ಮಿಸುವ ಮೂಲಕ ಭಾರತದ ಹೆಸರು ವಿಶ್ವಮಟ್ಟದಲ್ಲಿ ಮೂಡುವಂತೆ ಮಾಡಿದ ಸಂತೃಪ್ತಿ ಇದೆ. ಶ್ರೀ ಸಿದ್ಧಿವಿನಾಯಕ ವಸತಿ ಶಾಲೆ ಎರಡು ದಾಖಲೆ ಬರೆದ ಗ್ರಾಮೀಣ ಭಾಗದ ಏಕೈಕ ಶಾಲೆಯಾಗಿದೆ. ಸಂಸ್ಥೆ ಉದ್ದೇಶ ಕೂಡಾ ಗುಣಮಟ್ಟದ ಶಿಕ್ಷಣದ ಜತೆ ವಿದ್ಯಾರ್ಥಿಗಳ ಕೌಶಲ ನೋಡಿ ಪ್ರೋತ್ಸಾಹ ನೀಡುವುದೇ ಆಗಿದೆ.**

**। ಎಚ್.ಶರಣ ಕುಮಾರ** ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆ ಪ್ರಾಂಶುಪಾಲ

## ಗುವಿವಿ ಕುಲಸಚಿವ ಬಿ.ಶರಣಪ್ಪ ಸಲಹೆ

# ‘ಸಂಶೋಧಕ ಸತ್ಯದ ಮೇಲೆ ಬೆಳಕು ಚೆಲ್ಲಲಿ’

ಪ್ರಜಾವಾಣಿ ವಾರ್ತೆ



ಕಲಬುರಗಿಯ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯದ ವತಿಯಿಂದ ಮಂಗಳವಾರ ಸಂಶೋಧನಾ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಕುಲಸಚಿವ ಬಿ.ಶರಣಪ್ಪ ಮಾತನಾಡಿದರು

**ಕಲಬುರಗಿ:** ‘ವಿದ್ಯಾರ್ಥಿಗಳು ಸಂಶೋಧನೆ ನಡೆಸುವಾಗ ಪ್ರಬುದ್ಧತೆ ಜೊತೆಗೆ ಅಗತ್ಯ ನೈತಿಕ ಅಂಶಗಳನ್ನು ಅನುಸರಿಸುವುದು ಅಗತ್ಯವಿದೆ. ಯುಜಿಸಿ ನಿಯಮದಂತೆ ಕೃತಿ ಅಥವಾ ಸಂಶೋಧನಾ ಲೇಖನ ಬರೆಯುವಾಗ ಕ್ಷೇತ್ರದಲ್ಲಿನ ವಾಸ್ತವ ಸತ್ಯಾಂಶಗಳ ಮೇಲೆ ಬೆಳಕು ಚೆಲ್ಲಬೇಕು’ ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಸಚಿವ ಬಿ.ಶರಣಪ್ಪ ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲಯ ಗ್ರಂಥಾಲಯ ವಿಭಾಗದ ವತಿಯಿಂದ ಮಂಗಳವಾರ ಸಂಶೋಧನಾ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಮೂಲ ಲೇಖಕರ ಕೃತಿ ಮತ್ತು ಸಿದ್ಧಾಂತಗಳನ್ನು ಓದುವುದರಿಂದ ಹೊಸ ಅಂಶಗಳನ್ನು ಹುಡುಕಲು ಪ್ರೇರಣೆ ಸಿಗುತ್ತದೆ. ಅದರ ಜೊತೆಗೆ ಹೊಸ ವಿಷಯಗಳ ಪುರಾವೆ ಮತ್ತು ಸಾಕ್ಷಿಗಳಿಂದ ಅತ್ಯುತ್ತಮ ಗುಣಮಟ್ಟದ ಸಂಶೋಧನೆಯಾಗುತ್ತದೆ. ವೈಜ್ಞಾನಿಕ ಸಂಶೋಧನೆಯಿಂದ ಉತ್ತಮ ಜ್ಞಾನ ವೃದ್ಧಿ ಜೊತೆಗೆ ಸತ್ಯವನ್ನು ಸಮಾಜದ ಮುಂದೆ ತರಲು ಸಾಧ್ಯವಿದೆ’ ಎಂದು ಅವರು ಹೇಳಿದರು.

‘ಸಾಹಿತ್ಯ, ಕಥೆ, ಕವಿತೆ, ಕಾವ್ಯ, ಸಿನಿಮಾ ಕಥೆ ಬರವಣಿಗೆಗಿಂತ

**ಸೃಜನಶೀಲ ಲೇಖನ ಸಂಪನ್ಮೂಲವನ್ನು ನಕಲು ಮಾಡುವುದು ಕೃತಿಚೌರ್ಯ. ಕಾನೂನು ಪ್ರಕಾರ ಅಪರಾಧವಾಗುತ್ತದೆ**

**ಬಿ.ಶರಣಪ್ಪ** ಕುಲಸಚಿವ

ಸಂಶೋಧನಾ ಬರವಣಿಗೆ ಭಿನ್ನವಾಗಿರುತ್ತದೆ’ ಎಂದು ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲದ ಗ್ರಂಥಪಾಲಕ ಸುರೇಶ್ ಜಂಗೆ ಮೊದಲ ತಾಂತ್ರಿಕ ಗೋಷ್ಠಿಯಲ್ಲಿ ‘ಯುಜಿಸಿ ಮತ್ತು ಸ್ಕೋಪ್ಸ್‌ನಲ್ಲಿ ವೈಜ್ಞಾನಿಕ ಪ್ರಕಟಣೆ’ ವಿಷಯ ಕುರಿತು ಉಪನ್ಯಾಸ ನೀಡಿದರು.

ವಿಶ್ವವಿದ್ಯಾಲಯದ ಉಪ ಗ್ರಂಥಪಾಲಕಿ ಮಮತಾ ಮೇಸ್ತ್ರಿ ಎರಡನೇ ಗೋಷ್ಠಿಯಲ್ಲಿ ‘ಗ್ರಂಥಾಲಯ ಸಂಪನ್ಮೂಲಗಳು ಮತ್ತು ಹುಡುಕಾಟ ಕೌಶಲಗಳು’ ವಿಷಯ ಕುರಿತು ಹಾಗೂ ಮೂರನೇ ಗೋಷ್ಠಿಯಲ್ಲಿ ಪ್ರವೀಣಕುಮಾರ ಅವರು ‘ಕೃತಿ ಚೌರ್ಯದ ವಿರೋಧಿ ಪರಿಕರಗಳು’ ವಿಷಯ ಕುರಿತು ಉಪನ್ಯಾಸ ನೀಡಿದರು.

ಕಾರ್ಯಾಗಾರದಲ್ಲಿ 80ಕ್ಕೂ ಹೆಚ್ಚು ಸ್ನಾತಕೋತ್ತರ, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಇನ್ನಿತರ ಕಾಲೇಜುಗಳ ಉಪನ್ಯಾಸಕರು ಹಾಗೂ ಗ್ರಂಥಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ಕೇಮಣ್ಣ ಅಲ್ದಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶರಣುಗೌಡ ಪಾಟೀಲ ವಂದಿಸಿದರು.

# ಶಿಕ್ಷಣದ ಜೊತೆಗೆ ಸಂಸ್ಕಾರವೂ ಮುಖ್ಯ: ಡಾ. ಅಶೋಕ

**ಸಂ.ಕ. ಸಮಾಚಾರ ಆಳಂದ:** ಗುರು ಬ್ರಹ್ಮ, ಗುರು ವಿಷ್ಣು ಮಹೇಶ್ವರ ಎಂದು ಗುರುಗಳನ್ನು ಗೌರವಿಸಲಾಗುತ್ತದೆ. ಮನೆಯಲ್ಲಿ ತಂದೆ ತಾಯಿ ನಂತರ ಗುರುವಿನ ಸ್ಥಾನ ಮಹತ್ವಪೂರ್ಣವಾಗಿದೆ. ಶಿಕ್ಷಣದ ಜೊತೆಗೆ ಸಂಸ್ಕಾರವೂ ಮುಖ್ಯವಾಗಿದೆ ಎಂದು ರಾಜಶೇಖರ ಮಹಾಸ್ವಾಮಿಗಳ ಬಿ.ಎಡ್ ಕಾಲೇಜು ಪ್ರಾಂಶುಪಾಲ ಅಶೋಕ ರೆಡ್ಡಿ ಹೇಳಿದರು.



**ತಡಕಲ್ ಗ್ರಾಮದ ಮೋರಾರ್ಜಿ ದೇಸಾಯಿ ವಸತಿ ಶಾಲೆಯ ಗುರುವಂದನಾ ಮತ್ತು ಹಳೆಯ ವಿದ್ಯಾರ್ಥಿಗಳ ಮಹಾ ಸಂಗಮ ಕಾರ್ಯಕ್ರಮವನ್ನು ತಡಕಲದ ಸಿದ್ಧಮಲ್ಲ ಶಿವಾಚಾರ್ಯರು ಉದ್ಘಾಟಿಸಿದರು.**

ತಾಲೂಕಿನ ತಡಕಲ್ ಗ್ರಾಮದಲ್ಲಿ ಮೋರಾರ್ಜಿ ದೇಸಾಯಿ ವಸತಿ ಶಾಲೆಯ ಗುರುವಂದನಾ ಮತ್ತು ಹಳೆಯ ವಿದ್ಯಾರ್ಥಿಗಳ ಮಹಾ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಿಸ್ವಾರ್ಥ ಭಾವನೆಯಿಂದ ವಿದ್ಯಾರ್ಥಿಗಳನ್ನು ಸರಿ ಮಾರ್ಗದತ್ತ ಗುರುವು ಕೊಂಡೊಯ್ಯುತ್ತಾನೆ. ಆ ಕಾರಣದಿಂದ ವಿದ್ಯಾರ್ಥಿಗಳು ಜೀವನದಲ್ಲಿ ಆದರ್ಶ ಗುರುವಿನ ಮಾರ್ಗ ಅನುಸರಿಸಿ ಸಾಧನೆ ತೋರಲು ಸಾಧ್ಯವಾಗಿದೆ ಎಂದರು.

ಸಂಬುದ್ಧ ಪದವಿ ಮಹಾ ವಿದ್ಯಾಲಯದ ಪ್ರಾಂಶುಪಾಲ ಸಂಜಯ ಪಾಟೀಲ್ ಮಾತನಾಡಿದರು. ಎಸ್.ವಿ.ವಿ.ಎಚ್.ಎಸ್ ಹಿರಿಯ ಶಿಕ್ಷಕ ಎಂ.ಎಸ್. ಬೆಳ್ಳೆ ಮತ್ತು ದಿವ್ಯ ಸಾನಿಧ್ಯ ವಹಿಸಿದ ತಡಕಲ್ ಸಿದ್ಧಮಲ್ಲ ಶಿವಾಚಾರ್ಯ ಆಶೀರ್ವಚನ ನೀಡಿದರು. ಪ್ರಾಂಶುಪಾಲ ಭೌಗಮ್ಮ ಬಿರಾದಾರ ಅಧ್ಯಕ್ಷತೆ ವಹಿಸಿದರು. ಹಳೆಯ ವಿದ್ಯಾರ್ಥಿಗಳು ತಮಗೆ ಆದ ಅನುಭಗಳ ಬಗ್ಗೆ ಅನುಭವ ಹಂಚಿಕೊಂಡರು.

ಶಿಕ್ಷಕರಾದ ಬದ್ರಿನಾಥ ಮುಡಬಿ, ಹಣಮಂತರಾವ ಗೋಳಾ, ಮೊಹಮ್ಮದ ಶೇಖ, ಶಿವಶರಣಪ್ಪ ಪೂಜಾರಿ, ಅಶೋಕ ಆಳಂದ, ವೀರಣ್ಣಾ ಕೋರಳ್ಳಿ, ವಿವೇಕಾನಂದ ಸ್ವಾಮಿ, ಸುರೇಶ ಹುಗ್ಗಿ, ರೂಪಾ ಪೋದ್ದಾರ, ಡಿ.ಎಂ.ಚಲುವಾದಿ, ಅಣವೀರ ಹರಸೂರ, ಮಲ್ಲಣ್ಣಾಗೌಡ ಮಾಲಿಪಾಟೀಲ್, ಶ್ರೀನಾಥ ಕಣ್ಣಿ, ಶರಣು ಮಾಗಶೆಟ್ಟಿ, ರುಕಮ್ಮೋದ್ದಿನ ಗೋವಿಂದ ವಾಲೀಕರ, ಶರಣಬಸಪ್ಪ ಪಾಟೀಲ್, ಸಂತೋಷ, ಬಸವರಾಜ ಪಾವಲೆ, ಲಕನ್ನ ಕ್ಷೀರಸಾಗರ ವೇದಿಕೆಯಲ್ಲಿದ್ದರು. ಗೀತಾ ಸ್ವಾಗತಿಸಿದರೆ, ಆಶಾರಾಣಿ ನಿರೂಪಿಸಿ ವಂದಿಸಿದರು.

## ವಿಸ್ತೃತ ವರದಿ ಸಲ್ಲಿಸಿದ ವಿಶ್ರಾಂತ ಕುಲಪತಿ ಪಠಾಣ್ | 5 ಸಾವಿರದಷ್ಟು ವಿದ್ಯಾರ್ಥಿಗಳ ಪ್ರವೇಶ ಅಗತ್ಯ

# ಹೊಸ ವಿವಿಗೆ 5 ವರ್ಷಗಳಲ್ಲಿ ಬೇಕು 342 ಕೋಟಿ ರೂ.

■ **ದೇವರಾಜ್ ಕನಕಪುರ** ಬೆಂಗಳೂರು

devaraj.l@timesgroup.com

ಆರ್ಥಿಕ ಸಂಕಷ್ಟದಲ್ಲಿ ಬಳಲುತ್ತಿರುವ ವಿಶ್ವವಿದ್ಯಾಲಯಗಳ ಮಧ್ಯೆ ಒಂದು 'ಮಾದರಿ ವಿಶ್ವವಿದ್ಯಾಲಯ'ವಾಗಿ ರೂಪಿಸಬೇಕಾದಲ್ಲಿ 5 ವರ್ಷಕ್ಕೆ 342 ಕೋಟಿ ರೂ.ಗಳ ಜತೆಗೆ ನೂರಾರು ಎಕರೆ ಜಾಗದ ಅವಶ್ಯಕತೆ ಇದೆ.



ಇದರ ಜತೆಗೆ, 4-5 ಸಾವಿರದಷ್ಟು ವಿದ್ಯಾರ್ಥಿಗಳು ಪ್ರವೇಶ ಪಡೆಯಬೇಕು. ಕನಿಷ್ಠ 25 ಕಾಯಂ ಬೋಧಕರಿರಬೇಕೆಂದು ಹೊಸ ವಿಶ್ವವಿದ್ಯಾಲಯ ನಿರ್ಮಾಣದ ಬಗ್ಗೆ ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಹಾಗೂ ಧಾರವಾಡದ ವಿಶ್ರಾಂತ ಕುಲಪತಿ ಪ್ರೊ.ಎಂ.ಪಠಾಣ್ ಅವರು ಸರಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಶಿಫಾರಸು ಮಾಡಿದ್ದಾರೆ.

**ಆರಂಭಿಸಬೇಕಿರುವ ಕೋರ್ಸ್:** ಹೊಸ ವಿಶ್ವವಿದ್ಯಾಲಯಗಳು ಕೋರ್ಸ್‌ಗಳನ್ನು ಆರಂಭಿಸುವ ಮುನ್ನ ಸ್ವಲ್ಪ ಜಾಗರೂಕತೆ ವಹಿಸಬೇಕು. ಮೊದಲಿಗೆ ಮಾನವಿಕ ಕೋರ್ಸ್‌ಗಳನ್ನು ಆರಂಭಿಸಬೇಕು. ಆನಂತರ ಕಲಾ ನಿಕಾಯ. ಮೊದಲ ವರ್ಷದಲ್ಲಿ ವಿಜ್ಞಾನದ ಕೋರ್ಸ್ ಆರಂಭಿಸುವ ಅವಶ್ಯಕತೆ ಇಲ್ಲ. ಇದಾದ ಬಳಿಕ 2 ಅಥವಾ 3ನೇ ವರ್ಷಕ್ಕೆ ವಿಜ್ಞಾನ ಕೋರ್ಸ್ ಆರಂಭಿಸಬೇಕು. ವಾಣಿಜ್ಯ, ಶಿಕ್ಷಣ ಈ ರೀತಿಯಲ್ಲಿ ಹಂತಹಂತವಾಗಿ ಕೋರ್ಸ್‌ಗಳನ್ನು ಆಯ್ಕೆ ಮಾಡಬೇಕೆಂದು ತಿಳಿಸಿದೆ.

5 ವರ್ಷದಲ್ಲಿ ವಿಶ್ವವಿದ್ಯಾಲಯದಲ್ಲಿ ಪದವಿ, ಸ್ನಾತಕೋತ್ತರ ಪದವಿ, ಸಮಗ್ರ ಶಿಕ್ಷಣ ಸೇರಿದಂತೆ ಕನಿಷ್ಠ 4 ರಿಂದ 5 ಸಾವಿರ ವಿದ್ಯಾರ್ಥಿಗಳು ಮತ್ತು 25 ವಿಭಾಗಗಳಿರಬೇಕು. ಇದಕ್ಕೆ ವಿಶ್ವವಿದ್ಯಾಲಯ ಧನಸಹಾಯ ಆಯೋಗ(ಯುಜಿಸಿ) ನಿಯಮಗಳ ಪ್ರಕಾರ 10 ಪ್ರೊಫೆಸರ್, 20 ಸಹ ಪ್ರಾಧ್ಯಾಪಕ, 40 ಸಹಾಯಕ ಪ್ರಾಧ್ಯಾಪಕರಿರಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

### ಇರಬೇಕಾದ ಬೋಧಕ ವರ್ಗ

| | |
|---|---|
| ಪ್ರೊಫೆಸರ್ | 10 |
| ಸಹ ಪ್ರಾಧ್ಯಾಪಕ | 20 |
| ಸಹಾಯಕ ಪ್ರಾಧ್ಯಾಪಕ | 40 |

### ಪ್ರತಿ ವರ್ಷಕ್ಕೆ ಅಂದಾಜು ಲೆಕ್ಕ

| ವರ್ಷ | ರೂ.ಗಳಲ್ಲಿ |
|---|---|
| 1 | 8,35,92,000 |
| 2 | 6,43,00,000 |
| 3 | 26,65,00,000 |
| 4 | 117,56,00,000 |
| 5 | 183,66,41,000 |
| ಒಟ್ಟು | 3,42,66,33,000 |

### 7 ವಿವಿಯ ಪ್ರತ್ಯೇಕ ವರದಿ ಸಲ್ಲಿಸಲು ಸೂಚನೆ

ಉನ್ನತ ಶಿಕ್ಷಣ ಇಲಾಖೆಯು ಮಾದರಿ ವಿವಿ ಸ್ಥಾಪನೆಗೆ ತಗಲುವ ವೆಚ್ಚದ ಮಾಹಿತಿ ಪಡೆದಿದೆ. ಹೊಸದಾಗಿ ಆರಂಭಿಸಿರುವ 7 ವಿವಿಗಳಿಗೆ ಅನುದಾನವನ್ನು ಮಾದರಿ ವಿವಿಯಂತೆಯೇ ಕಲ್ಪಿಸಲಾಗಿದೆಯೇ ಎಂಬ ವಿಚಾರದ ಬಗ್ಗೆ ಪ್ರತ್ಯೇಕ ವರದಿ ಸಲ್ಲಿಸುವಂತೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಕೋರಿದ್ದಾರೆ.

...and printed by him at Bennett Coleman & Co Ltd. The Times of India Press, No 9/10/11-A, 4th Main, KIADB Bommasandra Industrial Area, Anekal Taluk, RNI No.71653/99

ಸಂಯುಕ್ತ ಕರ್ನಾಟಕ

# ಮೈಸೂರು ಮುಕ್ತ ವಿವಿ ಶೈಕ್ಷಣಿಕ ಹಗರಣ ಎಲ್ಲ ದಾಖಲೆ ಒದಗಿಸಲು ಇಡಿ ಆದೇಶ

## ಇಂಚಿಂಚೂ ಮಾಹಿತಿ ಕೇಳಿದ ಜಾರಿ ನಿರ್ದೇಶನಾಲಯ

**ಮೈಸೂರು:** ಮೈಸೂರಿನ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಡೆದಿರುವ ಸುಮಾರು ಒಂದು ಸಾವಿರ ಕೋಟಿ ಮೀರುವ ಬೃಹತ್ ಶೈಕ್ಷಣಿಕ ಹಗರಣದ ತನಿಖೆಗೆ ಸಂಬಂಧಿಸಿ ಮಹತ್ವದ ಬೆಳವಣಿಗೆಯಾಗಿದೆ. ಜಾರಿ ನಿರ್ದೇಶನಾಲಯ (ಇಡಿ) ಈಗ ಫೀಲ್ಡಿಗಿಳಿದಿದ್ದು ಹಗರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಒದಗಿಸಲು ವಿವಿಗೆ ಆದೇಶಿಸಿದೆ.

ಸಹಭಾಗಿತ್ವ ಸಂಸ್ಥೆಗಳ ಹೆಸರಿನಲ್ಲಿ ನಡೆದಿರುವ ಈ ಬೃಹತ್ ಶೈಕ್ಷಣಿಕ ಹಗರಣದಲ್ಲಿ ಸಾವಿರಾರು ಕೋಟಿ ಕೈಬದಲಾಗಿತ್ತಲ್ಲದೇ ವಿವಿಯ ಅಧಿಕೃತ ಬ್ಯಾಂಕ್ ಖಾತೆಗೆ ಜಮೆಯಾಗದೇ ಸುಮಾರು 250 ಕೋಟಿ ಹಣ ನಾಪತ್ತೆಯಾಗಿತ್ತು. ರಾಜ್ಯ ಸರ್ಕಾರ ಸದ್ಯ ಈ ಅವ್ಯವಹಾರದ ತನಿಖೆಯನ್ನು ಸಿಬಿಐಗೆ ವಹಿಸಿದೆ. ಇದರ ನಡುವೆಯೇ ಜಾರಿ ನಿರ್ದೇಶನಾಲಯವೂ ಪ್ರತ್ಯೇಕ ತನಿಖೆ ಆರಂಭಿಸಿದ್ದು ಹವಾಲಾ ನಿಯಂತ್ರಣ ಕಾಯ್ದೆಯನ್ವಯ ಮುಕ್ತ ವಿವಿಗೆ ನೋಟಿಸ್ ಜಾರಿ ಮಾಡಿ ಎಲ್ಲಾ ಅವಶ್ಯಕ ಮಾಹಿತಿ ಒದಗಿಸಲು ಆದೇಶಿಸಿದೆ.

2006–07ರಿಂದ 2023ರವರೆಗೆ ಮುಕ್ತ ವಿವಿ ಮಾಡಿಕೊಂಡಿರುವ ಸಹಭಾಗಿತ್ವ ಸಂಸ್ಥೆಗಳೊಂದಿಗಿನ ಒಪ್ಪಂದಗಳ ವಿವರ, ರಾಜ್ಯ, ಹೊರರಾಜ್ಯ ಮತ್ತು ವಿದೇಶಗಳಲ್ಲಿನ ಇಂತಹ ಸಂಸ್ಥೆಗಳ ವಿಳಾಸ ಮತ್ತು ಇನ್ನಿತರ ವಿವರಗಳು, ಮುಖ್ಯವಾಗಿ ವಿವಿಯ ಹಣಕಾಸು ಶುಲ್ಕ, ಲಾಭ ಮತ್ತು ನಷ್ಟದ ತನಿಖೆ, ಹಣದ ಹರಿವಿನ (ಕ್ಯಾಷ್‌ಫ್ಲೋ ಸ್ಟೇಟ್‌ಮೆಂಟ್) ವಿವರ ನೀಡಲು ತಾಕೀತು ಮಾಡಿದೆ.

ಬಹಳ ಮುಖ್ಯವಾಗಿ ಈ ಒಪ್ಪಂದಗಳಿಗೆ ಸಹಿಹಾಕಿರುವ ವಿಶ್ವವಿದ್ಯಾನಿಲಯದ ಅಧಿಕಾರಿ ವರ್ಗ, ವ್ಯವಸ್ಥಾಪನ ಮಂಡಳಿಯ ಸದಸ್ಯರ ಮಾಹಿತಿ, ಇವರ ವಿಳಾಸ, ಇವರ ಬ್ಯಾಂಕ್ ಖಾತೆಗಳು ಮತ್ತು ಪ್ಯಾನ್‌ಕಾರ್ಡ್ ಮಾಹಿತಿ, ವಿವಿಧ ಸಂಸ್ಥೆಗಳೊಂದಿಗೆ ವಿಶ್ವವಿದ್ಯಾನಿಲಯ ಮಾಡಿಕೊಂಡಿರುವ ಒಪ್ಪಂದದ ವರ್ಷವಾರು ವಿವರ, ಈ ಒಪ್ಪಂದದ ಪ್ರತಿಗಳು, ಈ ಸಮಯ ದಾಖಲಾಗಿದ್ದ ವಿದ್ಯಾರ್ಥಿಗಳ ವಿವರಗಳನ್ನೂ ಜಾರಿ ನಿರ್ದೇಶನಾಲಯ ಬಯಸಿದೆ.



ಸಿಬಿಐ ಜೊತೆಗೆ ಇಡಿ ಎಂಟ್ರಿ

ಸಾವಿರ ಕೋಟಿ ಮೀರುವ ಅವ್ಯವಹ

### ಎಲ್ಲವೂ ಹೊರ ಬೀಳುವ ಸ್ಥಿತಿ

ಸದ್ಯ ಜಾರಿ ನಿರ್ದೇಶನಾಲಯವು 2006–07ರಿಂದ ಆರಂಭವಾಗುವಂತೆ ದಾಖಲೆಗಳನ್ನು ಕಲೆಹಾಕಲು ಮುಂದಾಗಿದೆ. ಶೈಕ್ಷಣಿಕ ಸಹಭಾಗಿತ್ವದ ಹೆಸರಿನಲ್ಲಿ ಈ ವರ್ಷದಿಂದಲೇ ವಿವಿಧ ಸಂಸ್ಥೆಗಳೊಂದಿಗೆ ವಿವಿ ವ್ಯವಹಾರಕ್ಕೆ ಮುಂದಾಗಿತ್ತು. ಆರಂಭದಲ್ಲಿ ಉತ್ತಮ ಉದ್ದೇಶ ಹೊಂದಿದ್ದ ಈ ಒಪ್ಪಂದಗಳು ಕ್ರಮೇಣ ಅವ್ಯವಹಾರದ ಕೂಪಗಳಾದವು. ಹೀಗಾಗಿ 2006–07ರಿಂದಲೂ ವಿವಿಯಲ್ಲಿ ಕೆಲಸ ನಿರ್ವಹಿಸಿರುವ ಬಿಓಎಂ ಸದಸ್ಯರು, ಕುಲಪತಿಗಳು, ಕುಲಸಚಿವರು, ಹಣಕಾಸು ಅಧಿಕಾರಿಗಳು, ವಿವಿಧ ಉಪಕುಲಸಚಿವರು, ವಿಭಾಗಗಳ ಮುಖ್ಯಸ್ಥರು, ಪ್ರಮುಖ ಕಡತ ರಕ್ಷಕರು ಇನ್ನಿತರರು ನಡೆಸಿರಬಹುದಾದ ಎಲ್ಲಾ ಅವ್ಯವಹಾರಗಳೂ ಈಗ ಬಯಲಿಗೆ ಬೀಳುವ ಸ್ಥಿತಿ ನಿರ್ಮಾಣವಾಗಿದೆ.

### ಎಲ್ಲಾ ತನಿಖಾ ವರದಿ ನೀಡಿ

ಕುತೂಹಲದ ಸಂಗತಿಯೆಂದರೆ ಶೈಕ್ಷಣಿಕ ಸಹಭಾಗಿತ್ವ ಸಂಸ್ಥೆಗಳ ಜೊತೆಗಿನ ಒಪ್ಪಂದದಲ್ಲಿ ವಿಶ್ವವಿದ್ಯಾನಿಲಯ ಇದುವರೆಗೆ ಎಷ್ಟು ಆತಂರಿಕ ತನಿಖೆಗಳನ್ನು ನಡೆಸಿದೆ ಎಂದು ಜಾರಿ ನಿರ್ದೇಶನಾಲಯ ಪ್ರಶ್ನಿಸಿದೆ. ನಡೆಸಿದ್ದಲ್ಲಿ ಇದರ ವರದಿಯ ಪ್ರತಿಗಳು, ಇದರನ್ವಯ ತೆಗೆದುಕೊಂಡಿರುವ ಕ್ರಮದ ಮಾಹಿತಿ ನೀಡುವಂತೆಯೂ ವಿವಿಗೆ ಇಡಿ ನಿರ್ದೇಶನ ನೀಡಿದೆ.

ಇಷ್ಟೇ ಅಲ್ಲ 2008–09ರಿಂದ ಇಲ್ಲಿಯವರೆಗೆ ನಡೆದಿರುವ ಲೆಕ್ಕಪತ್ರ ಪರಿಶೀಲನೆಯ ವರದಿ ಮತ್ತು ಇದನ್ನು ನಡೆಸಿರುವ ಲೆಕ್ಕಪತ್ರ ಪರಿಶೋಧಕರ ವಿವರ, ಹಾಗೊಂದು ವೇಳೆ ಹಗರಣಕ್ಕೆ ಸಂಬಂಧಿಸಿ ವಿಶ್ವವಿದ್ಯಾನಿಲಯ ಪೊಲೀಸ್, ಸರ್ಕಾರ ಹೀಗೆ ಯಾರಿಗಾದರೂ ದೂರು ಇತ್ಯಾದಿ ಸಲ್ಲಿಸಿದ್ದರೆ ಇದರ ಪೂರ್ಣ ಮಾಹಿತಿ, ಈ ದೂರಿನಲ್ಲಿ ಉಲ್ಲೇಖಿತವಾಗಿರುವ ವ್ಯಕ್ತಿಗಳ ವಿವರ ಒದಗಿಸುವಂತೆಯೂ ಇಡಿ ಆದೇಶಿಸಿದೆ.



Most Important Topics For

# Science & Technology

UPSC Prelims & Mains

# CHANDRAYAAN-3'S PROPULSION MODULE PULLED BACK TO EARTH

EXPRESS NEWS SERVICE
@Bengaluru

IN its first attempt, the Indian Space Research Organisation (ISRO) was able to bring back the Propulsion Module (PM) to Earth orbit which carried the Vikram lander and Pragyaan rover to the Moon's south pole during the Chandrayaan-3 mission. This crucial step is closer to proving that samples from the lunar surface can be bought back for further research.

The space agency, in a statement said, "In another unique experiment, like the hop experiment on the Vikram Lander, the PM of Chandrayaan-3 was moved from an orbit around the Moon to an orbit around Earth." ISRO added that the first manoeuvre was performed on October 9, 2023, to raise apolune altitude to 5112km from 150km, thus increasing the period of orbit from 2.1 hrs to 7.2 hrs, the second on October 13. The PM is set to remain in Earth orbit for around a year being the only time ISRO has been able to conduct a reverse manoeuvre out of the three Moon missions.

The main objective of PM was to ferry the lander module to GTO (Geostationary Transfer Orbit) and separate the lander, post which the Spectro-polarimetry of HAbitable Planet Earth (SHAPE) payload in the PM was also operated. The initial plan was to operate the payload for about three months during the mission life of PM. However, to ISRO's benefit, the precise orbit injection by LVM3 and optimal earth and lunar burn manoeuvres resulted in the availability of over 100kg of fuel in the PM after over one month of operations in the lunar orbit.

"It was decided to use the available fuel in the PM to derive additional information for future lunar missions and demonstrate the mission operation strategies for a sample return mission," read the statement by ISRO.

To continue SHAPE payload for Earth observation, it was decided to re-orbit the PM to a suitable Earth orbit. This mission plan was worked out considering collision avoidance such as preventing the PM from crashing onto the Moon's surface or entering the Earth's GEO belt at 36,000km and orbits below that.

Currently, the propulsion module is orbiting Earth and crossed its first perigee on November 22 with an altitude of 1.54 lakh km. As per ISRO's prediction, there is no threat of close approach with any operational Earth-orbiting satellites.

SMARTER TECH

# AI could judge if user is of porn-watching age in UK

LONDON, REUTERS

Britain proposed new age-check guidance on Tuesday to protect children from accessing pornography online, including a suggestion to use AI-based technology to see if a viewer looks to be of legal age.

The government's newly passed Online Safety Act requires sites and apps that display or publish pornographic content to ensure that children are not normally able to encounter pornography on their service. The legal age to watch porn in Britain is 18 or over. On average children first see online pornography at 13, while nearly a quarter come across it by age 11, and one in 10 as young as 9, a 2021-2022 study by the Office of the Children's Commissioner for England showed.

"Regardless of their approach, we expect all services to offer robust protection to children from stumbling across pornography, and also to take care that privacy rights and freedoms for adults to access legal content are safeguarded," media regulator Ofcom CEO Melanie Dawes said.

The regulator described its suggestion on facial age estimation as using AI to analyse a viewer's features. That would likely require taking a selfie on a device and uploading it.

The watchdog said its proposed guidance also included photo identification matching, requiring a user to upload a photo ID such as passport or driving licence to prove their age, and credit chard checks.

Another suggestion was open banking, whereby users can consent to their bank sharing information with online porn sites to confirm they are over 18.

The Institute of Economic Affairs, a free-market think tank, said mandatory age verification threatened user privacy and would expose users to breaches and abuse by increasing the amount of sensitive data held by third parties. The regulator said weaker methods such as self-declaration of age, online payment methods that do not require a person to be 18, and disclaimers or warnings, would no longer meet the standards in its new guidance.

**ದಿನಕ್ಕೊಂದು ಸ್ಫೂರ್ತಿ ಕಥೆ**

**ಕನಸು ಮೋಹನ**

# ರ್‍ಯಾಪಿಡ್ಲಿ ಗ್ರೋಯಿಂಗ್- ರ್‍ಯಾಪಿಡೋ!

ಬೆಂಗಳೂರು ಭಾರತದ ಸ್ಟಾರ್ಟ್‌ಅಪ್ ರಾಜಧಾನಿ, ಇಲ್ಲಿರುವಷ್ಟು ನವೋದ್ಯಮಗಳು ದೇಶ, ವಿದೇಶದಲ್ಲೆಲ್ಲೂ ಇಲ್ಲ ಎಂಬ ಮಾತನ್ನು ಆಗಾಗ ಕೇಳಿರುತ್ತೇವೆ. ಆಗೆಲ್ಲ ಹೆಮ್ಮೆಯ ಜತೆಗೆ ಅಚ್ಚರಿ ಮತ್ತು ಪ್ರಶ್ನೆ ಮೂಡಿರಬಹುದು. ಅಂಥ ಕಂಪನಿಗಳು ಯಾವುವು ಎನಿಸಿರಬಹುದು. ಅದಕ್ಕೊಂದು ಉತ್ತಮ ಉದಾಹರಣೆಯೇ- ರ್‍ಯಾಪಿಡೋ!

ಓಲಾ, ಊಬರ್ ರೀತಿ ರ್‍ಯಾಪಿಡೋ ಎಂಬುದು ಅದು ಟ್ಯಾಕ್ಸಿ ಸೇವೆ ನೀಡುವ ಸಂಸ್ಥೆ/ಆ್ಯಪ್. ಆದರಿಲ್ಲಿ ಟ್ಯಾಕ್ಸಿಯೆಂದರೆ ಕಾರಲ್ಲ, ಸ್ಕೂಟರ್ ಮತ್ತು ಬೈಕ್, ಇಷ್ಟೇ ವಿಶೇಷ. 2015 ರಲ್ಲಿ ಮೂವರು ಗೆಳೆಯರು ಆಲೋಚಿಸಿ, ಜಾರಿಗೆ ತಂದಿರುವ ಈ ಉದ್ಯಮಕ್ಕೆ ನಮ್ಮ ಹೆಮ್ಮೆಯ ಬೆಂಗಳೂರೇ ತವರು ಮನೆ.

ಪವನ್ ಗುಂಟುಪಲ್ಲಿ, ರಿಷಿಕೇಶ್, ಅರವಿಂದ್ ಸಂಕ ಎಂಬ ಮೂವರು ಗೆಳೆಯರೇ ರ್‍ಯಾಪಿಡೋ ಎಂಬ ಕನಸಿಗೆ ಕಾವು ಕೊಟ್ಟವರು. ಖರಗಪುರದ ಐಐಟಿಯಲ್ಲಿ ಓದಿದ್ದ ಪವನ್ ರೋಪನ್ ಲ್ಯಾಬ್ಸ್ ಎಂಬ ಸಂಸ್ಥೆಯನ್ನೂ ಸ್ಥಾಪಿಸಿದ್ದರು. ನಂತರ ರಿಲಾಯನ್ಸ್ ಕಮ್ಯುನಿಕೇಷನ್ಸ್‌ನಲ್ಲಿ ಉದ್ಯೋಗ ಮಾಡಿದ್ದರು. ಇನ್ನೊಂದೆಡೆ ರಿಷಿಕೇಷ್ ಮತ್ತು ಅರವಿಂದ್ ತಮ್ಮ ಬಿಇ ಪದವಿ ನಂತರ ಕೆರಿಯರ್ ಎಂಬ ಸಂಸ್ಥೆ ಹುಟ್ಟುಹಾಕಿದ್ದರು.

ಬಿ-ಟು-ಬಿ( ಬಿಸಿನೆಸ್ ಟಿ ಬಿಸಿನೆಸ್) ನಲ್ಲಿ ಇರುವ ಅವಕಾಶಗಳಿಗಿಂತ ಬಿ-ಟು-ಸಿ (ಬಿಸಿನೆಸ್ ಟು ಕನ್ಸೂಮರ್) ಕ್ಷೇತ್ರದಲ್ಲಿ ಹೆಚ್ಚು ಅವಕಾಶಗಳಿವೆ ಎಂಬುದನ್ನು ಮೂವರೂ ಮನಗಂಡಿದ್ದರು. ಹೀಗಾಗಿ, ಈ ಕ್ಷೇತ್ರದಲ್ಲಿ ಹೊಸದೊಂದು ಐಡಿಯಾದ ಪ್ರಯೋಗಕ್ಕೆ ಮೂವರೂ ಅಣಿಯಾಗಿ ಕಾಯುತ್ತಿದ್ದರು.

ಈ ಐಡಿಯಾಗಳೇ ಹಾಗೆ. ಯಾವ ಕ್ಷಣ, ಯಾವ ಜಾಗ, ಜನ, ಸಂದರ್ಭದಿಂದ ಮೇಲೆದ್ದು ಬರುತ್ತವೋ ದೇವರೇ ಬಲ್ಲ. ಅದೊಂದು ದಿನ, ನಗರದ ಬೇರೆಲ್ಲಿಗೋ ಹೋಗಬೇಕು ಎಂದು ಕ್ಯಾಬ್ ಬುಕ್ ಮಾಡಿದರು. ಭಾರಿ ಟ್ರಾಫಿಕ್‌ನಿಂದ ಸರಿಯಾದ ಸಮಯದಲ್ಲಿ ನಿಗದಿತ ಸ್ಥಳ ತಲುಪಲೂ ಆಗಲಿಲ್ಲ, ಜತೆಗೆ ಸರ್ವಿಸ್ ಚಾರ್ಜ್ ದುಬಾರಿ ಬೇರೆ! ಆದರೆ, ಬೈಕ್‌ನವರು ಕಾರಿಗಿಂತ ಸಲೀಸಾಗಿ ಮುಂದೆ ಹೋಗುವುದು ಕ್ಯಾಬ್‌ನಲ್ಲಿದ್ದ ಈ ಮೂವರಿಗೆ ಕಂಡಿತು. ಆ ದೃಶ್ಯವೇ ಟರ್ನಿಂಗ್ ಪಾಯಿಂಟ್!

ದುಬಾರಿ ಎನಿಸುವ ಕಾರ್ ಟ್ಯಾಕ್ಸಿಗಳಿವೆ, ಇದನ್ನೇ ಸ್ವಲ್ಪ ಬದಲಿಸಿ ಕಡಿಮೆ ದರದಲ್ಲಿ ಬೈಕ್ ಟ್ಯಾಕ್ಸಿ ಮಾಡಿದರೆ ಹೇಗೆ ಎಂಬ ಐಡಿಯಾ ಹೊಳೆಯುತ್ತದೆ.





ಅದುವೇ ಇಂದಿನ ರ್‍ಯಾಪಿಡೋ ಸಂಸ್ಥೆ. ಇಂದಿಗೆ ಭಾರತದ 100 ಕ್ಕೂ ಹೆಚ್ಚು ನಗರಗಳಲ್ಲಿ ರ್‍ಯಾಪಿಡೋ ಲಭ್ಯ. 15 ಸಾವಿರಕ್ಕಿಂತ ಹೆಚ್ಚಿನ ಬೈಕ್ ಮಾಲೀಕರು ಕ್ಯಾಪ್ಟನ್(ಚಾಲಕ)ಗಳೆಂದು ನೊಂದಣಿ ಮಾಡಿಕೊಂಡಿದ್ದಾರೆ. ಇತ್ತೀಚಿಗೆ ಬೆಂಗಳೂರು ಸೇರಿದಂತೆ ದೇಶದ ಏಳೆಂಟು ಮಹಾನಗರಗಳಲ್ಲಿ ರ್‍ಯಾಪಿಡೋ ಸಂಸ್ಥೆಯೇ ತನ್ನ ಸ್ವಂತ ಎಲೆಕ್ಟ್ರಿಕ್ ಆಟೋಗಳನ್ನು ರಸ್ತೆಗಿಳಿಸಿದೆ. ಸಂಬಳಕ್ಕೆ ಆಟೋ ಚಾಲಕರನ್ನಿಟ್ಟು ಸೇವೆ ವಿಸ್ತರಿಸಿದೆ. ವಾರ್ಷಿಕ 90 ಕೋಟಿಗೂ ಹೆಚ್ಚಿನ ವಹಿವಾಟು ಮಾಡುತ್ತಿದೆ!

ಮಹಾನಗರಗಳಲ್ಲಿ ಮಧ್ಯಮ ವರ್ಗದ ಯುವಕರು ತಮ್ಮ ಬಿಡುವಿನ ವೇಳೆಯಲ್ಲಿ ಸ್ವಂತ ಖರ್ಚಿಗೆ ಸಾಕಾಗುವಷ್ಟು ದುಡಿಮೆ ಮಾಡಿಕೊಳ್ಳಲು ರ್‍ಯಾಪಿಡೋದಾರಿ ಮಾಡಿಕೊಟ್ಟಿದೆ. 2010ರ ನಂತರ ಖರೀದಿ ಮಾಡಿರುವ ಸ್ವಂತ ಬೈಕ್ ಇದ್ದವರು, ಡ್ರೈವಿಂಗ್ ಲೈಸನ್ಸ್ ಸೇರಿದಂತೆ ಉಳಿದೆಲ್ಲ ಮೂಲ ದಾಖಲೆ ಹೊಂದಿದವರು ರ್‍ಯಾಪಿಡೋಗೆ ಸೈ. ಬೈಕ್ ಬುಕ್ ಮಾಡುವವರಿಗೆ ಸುರಕ್ಷತೆ ಜತೆಗೆ ಕಡಿಮೆ ದರ ಮತ್ತು ತ್ವರಿತವಾಗಿ ತಮ್ಮಿಷ್ಟದ ಸ್ಥಳ ತಲುಪಲು ಅನುವು ಮಾಡಿಕೊಡುವುದೇ ರ್‍ಯಾಪಿಡೋದ ಸಿಂಪಲ್ ಬಿಸಿನೆಸ್ ಸ್ಟ್ರಾಟಜಿ.

ಮುಂದಿನ ದಶಕದಲ್ಲಿ ಬೈಕ್ ಟ್ಯಾಕ್ಸಿ ಕ್ಷೇತ್ರವು ಶೇ. 60 ಪಟ್ಟು ದೊಡ್ಡದಾಗಲಿದೆ ಎಂಬುದು ಆರ್ಥಿಕ ತಜ್ಞರ ಲೆಕ್ಕಾಚಾರ. ಒಂದೇ ಒಂದು ಸ್ವಂತ ಬೈಕ್ ಇಲ್ಲದೇ ಕೇವಲ ಐಡಿಯಾದಿಂದ ಆರಂಭವಾದ ರ್‍ಯಾಪಿಡೋದ ಅದ್ಭುತ ಜರ್ನಿಯಿದು. ನಿಮ್ಮಲ್ಲೂ ಕನಸುಗಳಿದ್ದರೆ ಅದರ ಸಾಕಾರಕ್ಕೆ ಇಂದೇ ಶುಭ ಮುಹೂರ್ತ ಎಂದುಕೊಂಡು ಯಾನ ಆರಂಭಿಸಿ.

# ಚಂದ್ರಯಾನ ಪಿಎಂ ಮರಳಿ ಕಕ್ಷೆಗೆ

**ಶ್ರೀಹರಿಕೋಟ:** ಚಂದ್ರಯಾನ-3 ಯೋಜನೆ ಯಶಸ್ವಿಯಾಗುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಪ್ರೊಪಲ್ಷನ್ ಮಾಡ್ಯೂಲ್ (ಪಿಎಂ) ಮರಳಿ ಭೂಕಕ್ಷೆಗೆ ಬಂದು ಸೇರಿದೆ. ತನಗೆ ವಹಿಸಿದ ಕಾರ್ಯವನ್ನು ಪೂರ್ಣಗೊಳಿಸಿದ ಬಳಿಕ ಚಂದ್ರಕಕ್ಷೆಯಲ್ಲೇ ಕೆಲ ದಿನಗಳವರೆಗೆ ಸುತ್ತುತ್ತಾ ಇದ್ದಿತು. ಈಗ ಆ ಉಪಗ್ರಹ ವಾಹಕವನ್ನು ಇಸ್ರೋ ಭೂಕೇಂದ್ರದಿಂದ ನಿಯಂತ್ರಿಸುತ್ತಾ ಮರಳಿ ಭೂಕಕ್ಷೆಗೆ ಬಂದು ಸೇರಿಕೊಳ್ಳುವಂತೆ ಮಾಡಿದೆ. ಆ ಮೂಲಕ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಇಸ್ರೊ ಮತ್ತೊಂದು ಸಾಧನೆ ಮಾಡಿದೆ.





ಬಾಣಂತಿಯರಲ್ಲಿ ಅತಿ ರಕ್ತಸ್ರಾವ ಆಗುವುದನ್ನು ತಿಳಿಸುವ ಸಾಧನವೊಂದು ಸಿದ್ಧವಾಗುತ್ತಿದೆ.

# ಬಾಣಂತಿಸ್ರಾವ ಅಪಾಯ ಸೂಚಿಸಬಲ್ಲ ಸಾಧನ

**ಕೊಳ್ಳೇಗಾಲ ಶರ್ಮ**

ಮೊನ್ನೆ ಸುಪ್ರಸಿದ್ಧ ಲೇಖಕಿಯೊಬ್ಬರು 'ಬಳೆ ಅಕ್ಯುಪಂಕ್ಚರಿನಂತೆ: ಅದನ್ನು ಧರಿಸುವುದರಿಂದ ಆರೋಗ್ಯಕ್ಕೆ ಒಳಿತು' ಎಂದು ಹೇಳಿದ್ದು ಸುದ್ದಿಯಾಗಿತ್ತು. ಗಾಜಿನ ಬಳೆಯೋ, ಚಿನ್ನದ ಬಳೆಯೋ ಎಂಬುದನ್ನು ಅವರು ಸ್ಪಷ್ಟ ಪಡಿಸಿರಲಿಲ್ಲವೆನ್ನಿ. ಬಳೆ ನಿಜವಾಗಿಯೂ ಆರೋಗ್ಯವನ್ನು ಕಾಪಾಡುತ್ತದೆಯೋ ಇಲ್ಲವೋ, ಬಾಣಂತಿಯರ ಆರೋಗ್ಯದ ಮೇಲೆ ಕಣ್ಣಿಡುವ ಬ್ಯಾಂಡೇಜೊಂದನ್ನು ಅಮೆರಿಕೆಯ ವಾಷಿಂಗ್ಟನ್ ವಿಶ್ವವಿದ್ಯಾಲಯದ ಬಯೋಮೆಡಿಕಲ್ ಎಂಜಿನಿಯರಿಂಗ್ ವಿಭಾಗದ ಕ್ರಿಸ್ಟೀನ್ ಎಂ. ಓಬ್ರಿಯನ್ ಮತ್ತು ಸಂಗಡಿಗರು ಸಿದ್ಧಪಡಿಸಿದ್ದಾರಂತೆ. ಇದನ್ನು ಧರಿಸಿದರೆ ಬಾಣಂತಿಯರಲ್ಲಿ ಅತಿಸ್ರಾವ ಆಗುವುದನ್ನು ಮುಂದಾಗಿಯೇ ಊಹಿಸಬಹುದು ಎಂದು 'ಬಯೋಮೆಡಿಕಲ್ ಆಪ್ಟಿಕಲ್ ಎಕ್ಸ್‌ಪ್ರೆಸ್' ಪತ್ರಿಕೆ ವರದಿ ಮಾಡಿದೆ.

ಹೆರಿಗೆ ಎನ್ನುವುದು ಹೆಣ್ಣಿಗೆ ಸಿರಿ ಹಾಗೂ ಸಂಕಟ – ಎರಡನ್ನೂ ತರುತ್ತದಷ್ಟೆ. ಹೊಸ ಜೀವದ ಆಗಮನ ಖುಷಿ ತರುವ ಹಾಗೆಯೇ, ಹೆರಿಗೆಯ ನೋವು, ಅದಕ್ಕೂ ಮುನ್ನ ಹಾಗೂ ಅನಂತರ ಅನುಭವಿಸಬೇಕಾದ ಆರೋಗ್ಯದ ಸಮಸ್ಯೆಗಳು ಸಂಕಟವನ್ನು ತರುವಂಥವು. ಹೆರಿಗೆಯ ನಂತರ ಬಾಣಂತಿಯರು ಅನುಭವಿಸುವ ಸಂಕಟಗಳಲ್ಲಿ ಪ್ರಮುಖವಾದದ್ದು ಅತಿ ರಕ್ತಸ್ರಾವ ಹಾಗೂ ಸೋಂಕು. ಇವುಗಳಲ್ಲಿ ಅತಿ ರಕ್ತಸ್ರಾವ ಜೀವಕ್ಕೆ ಅಪಾಯವನ್ನೊಡ್ಡುವಂಥದ್ದು. ವಿಶ್ವ ಆರೋಗ್ಯ ಸಂಸ್ಥೆಯ ವರದಿಗಳ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ ಏನಿಲ್ಲವೆಂದರೂ 45 ಸಾವಿರದಿಂದ 60 ಸಾವಿರ ಬಾಣಂತಿಯರು ಹೆರಿಗೆಯ ನಂತರ ಸಾವನ್ನಪ್ಪುತ್ತಾರೆ. ಇವರಲ್ಲಿ ಬಹುತೇಕ ಅಂದರೆ ಶೇ 25ರಿಂದ 60ರಷ್ಟು ಮಹಿಳೆಯರು ಸಾಯುವುದಕ್ಕೆ ಹೆರಿಗೆಯ ನಂತರ ಆಗುವ ಅತಿ ರಕ್ತಸ್ರಾವ ಕಾರಣ.

ಹೆರಿಗೆಯ ನಂತರ ಅಲ್ಪ ಸಮಯ ಕಳೆದಮೇಲೆ ರಕ್ತಸ್ರಾವ ತಾನಾಗಿಯೇ ನಿಲ್ಲುತ್ತದೆ. ನಿಲ್ಲಬೇಕು. ಆದರೆ ಕೆಲವರಲ್ಲಿ ಇದು ಆಗದೇ ಹೋಗಬಹುದು. ಹೆರಿಗೆಯ ನಂತರ ಅರ್ಧ ಲೀಟರಿನಷ್ಟು ರಕ್ತಸ್ರಾವ ಆಗುವುದು ಸಾಮಾನ್ಯ. ಇದನ್ನೂ ಮೀರಿದರೆ ಆಗ ಅದನ್ನು ಹೆರಿಗೆಯ ನಂತರದ ಅತಿರಕ್ತಸ್ರಾವ ಅಥವಾ 'ಪೋಸ್ಟ್ ಪಾರ್ಟಲ್ ಹಿಮರೇಜ್' (ಪಿಪಿಎಚ್) ಎಂದು ವೈದ್ಯರು ಗುರುತಿಸುತ್ತಾರೆ. ಸಿಸೇರಿಯನ್ ಶಸ್ತ್ರಕ್ರಿಯೆಗೊಳಗಾದವರಲ್ಲಿ ಒಂದು ಲೀಟರಿಗಿಂತಲೂ ಹೆಚ್ಚು ರಕ್ತ ನಷ್ಟವಾದಾಗ 'ಪಿಪಿಎಚ್' ಎಂದು ಹೇಳಲಾಗುತ್ತದೆ.

ಬಾಣಂತಿಯರಲ್ಲಿ ರಕ್ತಸ್ರಾವ ಯಾವಾಗ ಬೇಕಿದ್ದರೂ ಅತಿಯಾಗಬಹುದು. ಹೆರಿಗೆಯ ನಂತರ ಒಂದೇ ದಿನದೊಳಗೆ ರಕ್ತ ಅತಿಯಾಗಿ ನಷ್ಟವಾಗಬಹುದು. ಇದು ಆಸ್ಪತ್ರೆಯಲ್ಲಿ ಇರುವಾಗಲೇ ತಿಳಿಯುವುದರಿಂದ, ಅದಕ್ಕೆ ತಕ್ಕ ಚಿಕಿತ್ಸೆ ನೀಡಬಹುದು. ಆದರೆ ಕೆಲವರಲ್ಲಿ ಆರೇಳು ವಾರದವರೆಗೂ ರಕ್ತಸ್ರಾವ ಆಗುತ್ತಲೇ ಇರಬಹುದು. ಇದು ಸ್ವಲ್ಪ ಸಮಸ್ಯೆಯ ವಿಷಯ. ಹೆರಿಗೆಯಾಗಿ ಮನೆಗೆ ಮರಳಿದ ನಂತರ ಈ ರಕ್ತಸ್ರಾವ ಆಗುತ್ತದೆ. ಒಮ್ಮೆಲೇ ಇದು ಆಗದಿರುವುದರಿಂದ ಯಾವಾಗ ಅಪಾಯ ಬಂದೆರಗುತ್ತದೆ ಎಂದು ಊಹಿಸುವುದೂ ಕಷ್ಟ. ಬಾಣಂತಿಯರ ಸಾವಿಗೆ ಇದುವೇ ಕಾರಣ.

ಹೇಗೇ ಇರಲಿ, ಅತಿ ರಕ್ತಸ್ರಾವ ತಾಯಿಯ ಆರೋಗ್ಯಕ್ಕೆ ಹಾನಿಕರವೇ. ರಕ್ತಸ್ರಾವ ಅತಿಯಾಗಬಹುದು ಎಂಬುದನ್ನು ಊಹಿಸುವುದು ಸಾಧ್ಯವಾದರೆ, ಅಥವಾ ಆಗುವ ರಕ್ತಸ್ರಾವವನ್ನು ತಗ್ಗಿಸುವುದು ಸಾಧ್ಯವಾದರೆ ಹುಟ್ಟಿದ ಮಕ್ಕಳು ಅನಾಥರಾಗುವುದನ್ನು ತಡೆಯಬಹುದು. ತಂತ್ರಜ್ಞಾನ ಇದಕ್ಕೆ ನೆರವಾಗಬಹುದು. ಅಂತಹ ತಂತ್ರಜ್ಞಾನದಲ್ಲಿ ಓಬ್ರಿಯನ್ ತಂಡ ಸಿದ್ಧಪಡಿಸಿರುವ ಈ ಸಾಧನವೂ ಒಂದು.

ಪಿಪಿಎಚ್ ಸಂಕಟವನ್ನು ಕಡಿಮೆ ಮಾಡಲು ಹಲವು ಉಪಾಯಗಳಿವೆ. ರಕ್ತಸ್ರಾವ ಏಕೆ ಹೆಚ್ಚಾಗಿದೆ ಎನ್ನುವುದನ್ನು ಅವಲಂಬಿಸಿ ಈ ಚಿಕಿತ್ಸೆಗಳು ಇರುತ್ತವೆ. ಉದಾಹರಣೆಗೆ, ಗರ್ಭಕೋಶಕ್ಕೆ ರಕ್ತವನ್ನು ಪೂರೈಸುವ ನಾಳ ಒಡೆದಿರಬಹುದು. ಗರ್ಭದ್ವಾರ ಹೆರಿಗೆಯ ವೇಳೆ ಹರಿದು ರಕ್ತಸ್ರಾವ ಆಗುತ್ತಿರಬಹುದು. ಶಿಶುವಿಗೆ ಆಹಾರ ಪೂರೈಸುವ ಹೊಕ್ಕಳ ಬಳ್ಳಿಯ ಸ್ಥಾನ, ಹಾಗೂ ಅದು ಹರಿದು ಬೀಳುವ ಸಮಯ, ಹರಿಯುವ ರೀತಿಯೂ ರಕ್ತಸ್ರಾವವವನ್ನು ಹೆಚ್ಚಿಸಬಹುದು.

ಕಾರಣಗಳೇನು ಎಂಬುದಕ್ಕೆ ತಕ್ಕಂತೆ ಪರಿಹಾರಗಳೂ ಇರುತ್ತವೆ. ಗರ್ಭಾಶಯದ ಗೋಡೆಯ ಒತ್ತಡ ಹೆಚ್ಚಾಗಿ ರಕ್ತಸ್ರಾವ ಆಗುವುದುಂಟು. ಅಂತಹ ಸಂದರ್ಭಗಳಲ್ಲಿ ಗರ್ಭಕೋಶದೊಳಗೆ ಬಲೂನನ್ನು ಇಟ್ಟು, ಗಾಳಿ ತುಂಬಿ, ಗರ್ಭಕೋಶದ ಗೋಡೆ ಜರಿಯದಂತೆ ಮಾಡುವ ಉಪಾಯವಿದೆ. ರಕ್ತಸ್ರಾವಕ್ಕೆ ಕಾರಣವಾದ ಹಾರ್ಮೋನುಗಳನ್ನು ನಿಯಂತ್ರಿಸಲು ಬೇರೆ ಔಷಧಗಳನ್ನೂ, ಹಾರ್ಮೋನನ್ನೂ ನೀಡುವುದುಂಟು. ಶಸ್ತ್ರಕ್ರಿಯೆಯನ್ನೂ ಮಾಡುವುದುಂಟು. ಎರಡು ವರ್ಷಗಳ ಹಿಂದೆ ಗರ್ಭಕೋಶದೊಳಗೆ ನಿರ್ವಾತವನ್ನು ಉಂಟು ಮಾಡುವ ಜಾಡಾ ಎನ್ನುವ ಸಾಧನವೊಂದನ್ನು ಯಶಸ್ವಿಯಾಗಿ ಬಳಸಲಾಗಿತ್ತು. ರೋಗಿಗಳಲ್ಲಿ ಬಳಸಲು ಅದಕ್ಕೆ ಅಮೆರಿಕೆಯ ಆಹಾರ ಮತ್ತು ಔಷಧ ನಿಕಾಯ (ಎಫ್‌ಡಿಎ) ಅನುಮತಿಯೂ ದೊರೆತಿತ್ತು. 'ಭಾರತದಲ್ಲಿ ಬಕ್ರಿ ಬಲೂನು ಎನ್ನುವ ಬಲೂನು ವ್ಯವಸ್ಥೆಯೇ ಸದ್ಯಕ್ಕೆ ಇರುವ ಉಪಾಯ' ಎನ್ನುತ್ತಾರೆ, ಬೆಂಗಳೂರಿನ ಪ್ರಸೂತಿತಜ್ಞೆ ಡಾ. ಶಾಂತಲ.

ಆದರೂ ತಕ್ಷಣ ಕಾಣದ ರಕ್ತಸ್ರಾವ ಅನಂತರ ಹೆಚ್ಚುವ ಸಾಧ್ಯತೆಗಳಿವೆ. ಹೀಗಾದಾಗ ಆಸ್ಪತ್ರೆಯಿಂದ ಮನೆಗೆ ಮರಳಿದ ಬಾಣಂತಿ ಇದ್ದಕ್ಕಿದ್ದ ಹಾಗೆ ಅಸ್ವಸ್ಥವಾಗಬಹುದು. ರಕ್ತಹೀನಳಾಗಬಹುದು. ಈ ಸಾಧ್ಯತೆಗಳನ್ನು ಮುಂದಾಗಿಯೇ ಗುರುತಿಸಲು ರೀಗ ತಕ್ಕ ಸಾಧನಗಳಿಲ್ಲ. ಮನೆಯಲ್ಲಿ ಎಷ್ಟು ಪ್ಯಾಡುಗಳನ್ನು ಬಳಸಿದೆವು ಎಂದೋ, ಆಸ್ಪತ್ರೆಯಲ್ಲಿ ರಕ್ತದೊತ್ತಡ, ಹೃದಯದ ಬಡಿತ ಮೊದಲಾದವನ್ನು ಆಗಾಗ್ಗೆ ಪರಿಶೀಲಿಸಿ ತೀರ್ಮಾನಿಸಬೇಕಾಗುತ್ತದೆ. ರಕ್ತಸ್ರಾವದ ಪ್ರಮಾಣವನ್ನು ತಿಳಿಸುವ ಸಾಧನವಿದ್ದರೆ ಹೇಗೆ ಎಂಬ ಐಡಿಯಾವೇ ಒಬ್ರಿಯೆನ್ ತಂಡದ ಸಾಧನೆಗೆ ಮೂಲ.

ಮುಂಗೈ ಮೇಲೆ ಧರಿಸುವ ಈ ಸಾಧನ, ಲೇಸರು ಬೆಳಕನ್ನು ಚೆಲ್ಲಿ ರಕ್ತನಾಳದಲ್ಲಿ ರಕ್ತದ ಹರಿವು ಹೇಗಿದೆ ಎಂಬುದನ್ನೂ, ರಕ್ತದ ಒತ್ತಡವನ್ನೂ ಗಮನಿಸುತ್ತದೆ. ಆದರಲ್ಲಾಗುತ್ತಿರುವ ಏರುಪೇರಿಗೂ ರಕ್ತಸ್ರಾವಕ್ಕೂ ಸಂಬಂಧವಿರುವುದರಿಂದ, ಜೊತೆಗಿರುವ ಇಲೆಕ್ಟ್ರಾನಿಕ್ ಸಾಧನ ಅದನ್ನು ಗುರುತಿಸಿ, ತಿಳಿಸಬಲ್ಲುದು. ಈ ಸಾಧನವನ್ನು ಸದ್ಯಕ್ಕೆ ಕೃತಕ ರಕ್ತನಾಳದಲ್ಲಿ ಹಾಲಿನಂತಹ ದ್ರವವನ್ನು ವಿವಿಧ ಒತ್ತಡದಲ್ಲಿ ಹರಿಸಿ ಪರೀಕ್ಷಿಸಲಾಗಿದೆ. ತದನಂತರ ಹಂದಿಗಳಲ್ಲಿ ಕೃತಕವಾಗಿ ರಕ್ತಸ್ರಾವವನ್ನು ಉಂಟುಮಾಡಿ, ಪರೀಕ್ಷಿಸಲಾಗಿದೆ. ರಕ್ತನಾಳದಲ್ಲಿ ಆಗುವ ಒತ್ತಡ ಹಾಗೂ ರಕ್ತದ ಹರಿವಿನ ಪ್ರಮಾಣವನ್ನೇ ಗುರುತಿಸಿ, ರಕ್ತಸ್ರಾವ ಎಷ್ಟಾಗುತ್ತದೆಂದು ಇದು ಊಹಿಸಬಲ್ಲುದು. ಮುಂಗೈಯಲ್ಲಿ ಧರಿಸುವ ಸ್ಮಾರ್ಟ್ ವಾಚುಗಳು ಸದ್ಯಕ್ಕೆ ಹೃದಯದ ಬಡಿತ ಹಾಗೂ ರಕ್ತದ ಆಕ್ಸಿಜನ್ ಪ್ರಮಾಣವನ್ನಷ್ಟೆ ಅಳೆಯುತ್ತವೆ. ರಕ್ತದ ಹರಿವು ಹಾಗೂ ಒತ್ತಡದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಆದಾಗುತ್ತಿರುವಂತೆಯೇ ಪತ್ತೆ ಮಾಡಿ ಸೂಚಿಸುವ ಈ ಸಾಧನ ಬಾಣಂತಿಯರ ಆರೋಗ್ಯದ ಮೇಲೆ ಕಣ್ಣಾವಲಿಡಲು ಅನುಕೂಲಿ. ಬಾಣಂತಿಯರಿಗೆ ಚಿನ್ನದ ಬಳೆ ತೊಡಿಸುವೆವೋ ಇಲ್ಲವೋ, ಈ ಸಾಧನವನ್ನು ತೊಡಿಸುವ ದಿನಗಳು ಶೀಘ್ರದಲ್ಲಿಯೇ ಬರಬಹುದು. 'ನಮ್ಮ ಸ್ಟಾರ್ಟಪ್ ಅರ್ಮರ್ ಮೆಡಿಕಲ್ ಈ ಸಾಧನವನ್ನು ಇನ್ನೊಂದೆರಡು ವರ್ಷಗಳಲ್ಲಿ ಮಾರಾಟ ಮಾಡಲಿದೆ' ಎನ್ನುತ್ತಾರೆ, ಕ್ರಿಸ್ಟೀನ್ ಓಬ್ರಿಯೆನ್. 'ಕೇವಲ ಬಾಣಂತಿಯರಿಗಷ್ಟೆ ಅಲ್ಲ, ಹೃದಯ ರೋಗಿಗಳಿಗೂ, ರಕ್ತದೊತ್ತಡ ಅತಿ ಹೆಚ್ಚಿರುವವರಿಗೂ ಇದು ಆರೋಗ್ಯದ ಮೇಲೆ ಕಣ್ಣಿಡಲು ನೆರವಾಗುತ್ತದೆ' ಎನ್ನುವುದು ಅವರ ವಿಶ್ವಾಸ.


ಸಾಧನೆ ಇಸ್ರೋದ ಮಾನವಸಹಿತ ಗಗನಯಾನ ಯೋಜನೆಗೆ ಮುನ್ನುಡಿ

# ಚಂದ್ರಯಾನ 3 ನೌಕೆ ಮರಳಿ ಭೂಮಿ ಕಕ್ಷೆಗೆ

• **ಪಿಟಿಐ** ಬೆಂಗಳೂರು

ವಿಕ್ರಂ ಲ್ಯಾಂಡರ್ ಮತ್ತು ಪ್ರಜ್ಞಾನ್ ರೋವರ್ ಅನ್ನು ಯಶಸ್ವಿಯಾಗಿ ಚಂದ್ರನ ದಕ್ಷಿಣದ ಧ್ರುವ ಮೇಲೆ ಇಳಿಸುವಲ್ಲಿ ನೆರವಾಗಿದ್ದ ಚಂದ್ರಯಾನ 3 ನೌಕೆ (ಪ್ರೊಪಲ್ಷನ್ ಮಾಡ್ಯೂಲ್) ಯನ್ನು ಚಂದ್ರನ ಕಕ್ಷೆಯಿಂದ ಮರಳಿ ಭೂಮಿಯ ಕಕ್ಷೆಗೆ ತರುವಲ್ಲಿ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ.

ಕಳೆದ ಅಕ್ಟೋಬರ್‌ನಲ್ಲಿ ನಡೆಸಲಾದ ಈ ಪ್ರಯೋಗವು ಭವಿಷ್ಯದಲ್ಲಿ ಚಂದ್ರನ ಮೇಲೆ ಇಳಿಯುವ ನೌಕೆಯನ್ನು ಮರಳಿ ಭೂಮಿಗೆ ಕರೆತರುವ, ಇಂಥ ಪ್ರಯೋಗಕ್ಕೆ ಬೇಕಾದ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲು ಮತ್ತು ಅವುಗಳ ಸಾಮರ್ಥ್ಯವನ್ನು ಪರೀಕ್ಷಿಸಲು, ಗುರುತ್ವಾಕರ್ಷಣೆ ನೆರವಿನಿಂದ ನಡೆಸಬಹುದಾದ ಸಂಚಾರದ ಪರೀಕ್ಷೆಗಳಿಗೆ ಬರೆದ ಯಶಸ್ವಿ ಮುನ್ನುಡಿ ಎಂದು ವಿಶ್ಲೇಷಿಸಲಾಗಿದೆ.



**ಮರಳಿ ಕಕ್ಷೆಗೆ:** ಕಳೆದ ಜು.14ರಂದು ಎಲ್‌ವಿಎಂ3 - ಎಂ4 ರಾಕೆಟ್ ಮೂಲಕ ಚಂದ್ರಯಾನ 3 ನೌಕೆಯನ್ನು ಗಗನಕ್ಕೆ ಉಡ್ಡಯನ ಮಾಡಲಾಗಿತ್ತು. ಆ.17ರಂದು ಲ್ಯಾಂಡರ್ ಮತ್ತು ರೋವರ್ ಚಂದ್ರಯಾನ 3 ನೌಕೆಯಿಂದ ಬೇರ್ಪಟ್ಟಿತ್ತು. ಬಳಿಕ ನೌಕೆ ಚಂದ್ರನ ಕಕ್ಷೆಯಲ್ಲೇ ಸುತ್ತುತ್ತಿದ್ದು, ಈ ವೇಳೆ ಅದರೊಳಗಿನ ಸ್ಪೆಕ್ಟ್ರೋ ಪೋಲಾರ್‌ಮೆಟ್ರಿ ಆಫ್ ಹ್ಯಾಬಿಟೆಬಲ್ ಪ್ಲಾನೆಟ್ ಅರ್ಥ್ (ಶೇಪ್) ಉಪಕರಣ ಬಳಸಿ ಹಲವು ಪ್ರಯೋಗಗಳನ್ನು ನಡೆಸಲಾಗಿತ್ತು.

ಈ ನಡುವೆ ಪೂರ್ವ ನಿರ್ಧರಿತ ಎಲ್ಲ ಪ್ರಯೋಗಗಳನ್ನು ನಡೆಸಿದ ಬಳಿಕವೂ ನೌಕೆಯಲ್ಲಿ 100 ಕೆಜಿಯಷ್ಟು ಇಂಧನ ಉಳಿದಿರುವುದನ್ನು ಗ್ರಹಿಸಿದ ಇಸ್ರೋ ವಿಜ್ಞಾನಿಗಳು ಮತ್ತೊಂದು ಕ್ಲಿಷ್ಟಕರ ಪ್ರಯೋಗಕ್ಕೆ ನಿರ್ಧರಿಸಿದರು. ಅದರಂತೆ ನೌಕೆಯನ್ನು ಭವಿಷ್ಯದ ಇನ್ನಷ್ಟು ಯೋಜನೆಗಳಿಗೆ ಅಗತ್ಯವಾದ ಮಾಹಿತಿ ಸಂಗ್ರಹಣೆಗಾಗಿ ಬಳಸಲು ನಿರ್ಧರಿಸಿದ ವಿಜ್ಞಾನಿಗಳು ಅದರಂತೆ ನೌಕೆಯಲ್ಲಿನ ಇಂಧನವನ್ನು ಉರಿಸಿ ಹಲವು ಹಂತಗಳಲ್ಲಿ ಕಕ್ಷೆ ಬದಲಾವಣೆ ಮೂಲಕ ಅಂತಿಮವಾಗಿ ಭೂಮಿಯ ಕಕ್ಷೆಗೆ ತಂದು ನಿಲ್ಲಿಸಿದ್ದಾರೆ.

ಸದ್ಯ ನೌಕೆಯನ್ನು ಭೂಮಿಯಿಂದ 1.15 ಲಕ್ಷ ಕಿ.ಮೀನಿಂದ 1.54 ಲಕ್ಷ ಕಿ.ಮೀ ದೂರದ ಕಕ್ಷೆಯಲ್ಲಿ ಇರಿಸಲಾಗಿದೆ. ಪ್ರತಿ 13 ದಿನಕ್ಕೆ ಒಮ್ಮೆ ನೌಕೆ ಭೂಮಿಯನ್ನು ಸುತ್ತುಹಾಕುತ್ತಿದೆ.

# ಜೇನುಸಾಕಣೆಗೂ ಬಂತು ಕೃತಕ ಬುದ್ಧಿಮತ್ತೆ

ಇ.ಎಸ್. ಸುಧೀಂದ್ರ ಪ್ರಸಾದ್



ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ 'ಬೆಂಗಳೂರು ಟೆಕ್ ಸಮ್ಮಿಟ್'ನಲ್ಲಿ ಪ್ರದರ್ಶನಗೊಂಡ ಸ್ಮಾರ್ಟ್ ಜೇನು ಕೃಷಿಯಲ್ಲಿ ಬಳಸುವ ಮಾದರಿ

ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್.

ಕೃಷಿಯತ್ತ ವಾಲುತ್ತಿರುವ ಯುವಸಮುದಾಯಕ್ಕೆ ಹೆಚ್ಚಿನ ಪರಿಶ್ರಮ ಬೇಡದ ಹಾಗೂ ಆಧುನಿಕ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಬಹುದಾದ ಜೇನುಸಾಕಣೆ ಉಪಕರಣವೊಂದು ಸಿದ್ಧವಾಗಿದೆ. ಅದು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ 'ಬೆಂಗಳೂರು ಟೆಕ್ ಸಮ್ಮಿಟ್'ನಲ್ಲಿ ಗಮನ ಸೆಳೆಯಿತು. ಮಂಗಳೂರಿನ ಸೇಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ 4ನೇ ವರ್ಷದಲ್ಲಿ ಓದುತ್ತಿರುವ ಆರು ವಿದ್ಯಾರ್ಥಿಗಳು ಇಂಥದ್ದೊಂದು ರೈತಸ್ನೇಹಿಯಾದ ಆಧುನಿಕ ಜೇನುಪೆಟ್ಟಿಗೆಯನ್ನು ಅಭಿವೃದ್ಧಿಪಡಿಸಿದ್ದಾರೆ. ಬೇರೊಂದು ವೃತ್ತಿ ಮಾಡುತ್ತಲೇ ಊರಿನ ಜಮೀನಿನಲ್ಲಿರುವ ಜೇನುಪೆಟ್ಟಿಗೆಯನ್ನು ದೂರದಿಂದಲೇ ಅವಲೋಕಿಸಿ, ಅದನ್ನು ನಿರ್ವಹಿಸಬಹುದಾದ ತಂತ್ರಜ್ಞಾನ ಇದಾಗಿದೆ.

ಜೇನುಸಾಕಣೆಯಲ್ಲಿ ನಿತ್ಯವೂ ಪೆಟ್ಟಿಗೆಯತ್ತ ಒಂದು ಸುತ್ತು ಹಾಕಬೇಕಾದ್ದು ಅನಿವಾರ್ಯ. ತುಪ್ಪದ ಇಳುವರಿ ಉತ್ತಮವಾಗಿರಬೇಕೆಂದರೆ ಜೇನುಪರಿವಾರದ ನಿತ್ಯದ ಚಟುವಟಿಕೆ ಮೇಲೆ ನಿಗಾ ಇರಬೇಕಾದ್ದು ಅಷ್ಟೇ ಮುಖ್ಯ. ಅದಕ್ಕಾಗಿಯೇ ಅಗತ್ಯ ಸೆನ್ಸರ್‌ಗಳನ್ನು ಅಭಿವೃದ್ಧಿಪಡಿಸಿರುವ ಈ ವಿದ್ಯಾರ್ಥಿಗಳ ತಂಡ, ಅವುಗಳನ್ನು ಪೆಟ್ಟಿಗೆಯೊಳಗೆ ಅಳವಡಿಸಿದೆ. ಇದಕ್ಕೆ 'ಹೈವ್‌ಲಿಂಕ್' ಎಂಬ ಹೆಸರನ್ನೂ ಇಟ್ಟಿದೆ.

ಈ ತಂತ್ರಜ್ಞಾನದಿಂದ ಪೆಟ್ಟಿಗೆಯೊಳಗಿನ ತಾಪಮಾನದ ಮಾಹಿತಿ, ಆರ್ದ್ರತೆಯ ಪ್ರಮಾಣ, ತುಪ್ಪದ ಉತ್ಪಾದನೆ ಮೇಲೆ ನಿರಂತರ ನಿಗಾ ಇಡುವ ತೂಕ ಮಾಪನ, ಮಳೆಗಾಲದಲ್ಲಿ ಕೃತಕವಾಗಿ ನೀಡಬೇಕಾದ ಆಹಾರದ ಸಮರ್ಪಕ ಬಳಕೆಯ ಮಾಹಿತಿ ಇತ್ಯಾದಿಗಳು ಲಭ್ಯ.

ಇಷ್ಟು ಮಾತ್ರವಲ್ಲದೇ, ಜೇನುನೊಣಗಳ ಕುಟುಂಬದಲ್ಲಿನ ವಿಘಟನೆ, ಯಾವುದೋ ಕಾರಣಕ್ಕೆ ಇಡೀ ಜೇನುಕುಟುಂಬವೇ ಪರಾರಿಯಾಗುವುದು, ಅನ್ಯ ಕೀಟಗಳ ದಾಳಿ ಹಾಗೂ ಜೇನುಹುಳುಗಳ ಅಸಹಜ ಸಾವು, ಜೇನುತುಪ್ಪದ ಇಳುವರಿ ಸಮಯ – ಹೀಗೆ ಇವೆಲ್ಲದರ ಮಾಹಿತಿಯನ್ನು ನೀಡುವ ಸೆನ್ಸರ್‌ಗಳನ್ನು ಈ ಪೆಟ್ಟಿಗೆಯಲ್ಲಿ ಅಳವಡಿಸಲಾಗಿದೆ.

ಮನೆ ಅಥವಾ ತೋಟದ ಅಯಕಟ್ಟಿನ ಸ್ಥಳಗಳಲ್ಲಿ ಪೆಟ್ಟಿಗಳನ್ನು ಇಟ್ಟು, ಅವುಗಳಲ್ಲಿ ಒಂದೊಂದಕ್ಕೂ ಈ ಸಾಧನ ಅಳವಡಿಸಬಹುದು. ಅದರ ಮಾಹಿತಿಯನ್ನು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡುವ ಅಪ್ಲಿಕೇಷನ್‌ನಲ್ಲಿ ನಮೂದಿಸಬೇಕು. ಅದಾದ ನಂತರ ಪ್ರತಿ ಪೆಟ್ಟಿಗೆಯ ಗ್ರಾಫ್ ಸಹಿತ ಮಾಹಿತಿ ಲಭ್ಯವಾಗುತ್ತದೆ. ಇಲ್ಲಿ ಪೆಟ್ಟಿಗೆಗಳಿಂದ ಲಭ್ಯವಾಗುವ ಮಾಹಿತಿ ಆಧರಿಸಿ ಕೃತಕ ಬುದ್ಧಿಮತ್ತೆಯ ಆಧಾರದ ತಂತ್ರಾಂಶವು ತನ್ನ ವರದಿ ನೀಡುತ್ತದೆ. ಯಾವ ಪೆಟ್ಟಿಗೆಗೆ ಹೆಚ್ಚಿನ ನಿಗಾ ಅಗತ್ಯ, ಯಾವುದರಲ್ಲಿ ಹೆಚ್ಚು ತುಪ್ಪ ಆಗುತ್ತಿದೆ. ಸಮಸ್ಯೆ ಇರುವ ಪೆಟ್ಟಿಗೆಯ ಸ್ಥಳಾಂತರ ಇತ್ಯಾದಿ ನಿರ್ಣಯ ತೆಗೆದುಕೊಳ್ಳಲು ಸಾಧ್ಯ ಎಂದೆನ್ನುತ್ತಾರೆ, ತಂಡದ ಅಶ್ವಿನ್ ಡಿಸೋಜಾ.

'ಈ ಸಾಧನವನ್ನು ಇನ್ನಷ್ಟು ಉತ್ತಮಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಹಲವು ಪ್ರಶಸ್ತಿಗಳನ್ನೂ ನಮ್ಮ ಈ ಪ್ರಯೋಗ ಪಡೆದುಕೊಂಡಿದೆ. ಇದು ಯುವರೈತರನ್ನು ಒಳಗೊಂಡು ಜೇನುಕೃಷಿ ನಡೆಸುವ ಪ್ರತಿಯೊಬ್ಬರಿಗೂ ನೆರವಾಗಲಿದೆ' ಎಂದೆನ್ನುತ್ತಾರೆ, ಅವರು.

ಅಬ್ದುಲ್ ಬಸಿತ್ ಮತ್ತು ದೀಪ್ತಿ ಪಿ., ವಿಯೋಲಾ ರೋಡ್ರಿಗಸ್, ಜಾಯ್ಸನ್ ಬೆನ್ನಿಸ್, ಕಂಪ್ಯೂಟರ್ ಸೈನ್ಸ್ ವಿಭಾಗದ ಜೋಶುವಾ ಕ್ವಿಂಥಿನೋ ಅಲ್ಬುಕರ್ಕ್ ಈ ಸಂಶೋಧನಾ ತಂಡದ ಇತರ ಸದಸ್ಯರು. ಈ ತಂಡಕ್ಕೆ ಎಲೆಕ್ಟ್ರಾನಿಕ್ಸ್ ಮತ್ತು ಸಂವಹನ ಎಂಜಿನಿಯರಿಂಗ್ ವಿಭಾಗದ ಸಹಾಯಕ ಪ್ರಾಧ್ಯಾಪಕ ಗ್ಲೆಸ್ಸನ್ ಟೋನಿ ಸಂಯೋಜಕರಾಗಿದ್ದಾರೆ. ಜತೆಗೆ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದ ಜೇನುಸಾಕಣೆ ವಿಭಾಗದ ಸಹಾಯಕ ಪ್ರಾಧ್ಯಾಪಕ ಕೆ.ಟಿ. ವಿಜಯಕುಮಾರ್ ಮಾರ್ಗದರ್ಶಕರಾಗಿದ್ದಾರೆ.

## ಬ್ಯಾಟರಿಚಾಲಿತ ಗಾಲಿಕುರ್ಚಿ

ಮಂಗಳೂರಿನ ಸೇಂಟ್ ಜೋಸೆಫ್ ಎಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ವಿಭಾಗದ ಯುವ ತಂತ್ರಜ್ಞರ ತಂಡವು ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆಯಿಂದ ಹಾಸಿಗೆ ಹಿಡಿದವರಿಗೆ ಹಾಸಿಗೆಯಾಗಿ ಬದಲಾಗುವ ಗಾಲಿಕುರ್ಚಿಯನ್ನು ಅಭಿವೃದ್ಧಿಪಡಿಸಿದೆ. ಇದು ಬ್ಯಾಟರಿ ಚಾಲಿತವಾಗಿದ್ದು, ಮತ್ತೊಬ್ಬರನ್ನು ಅವಲಂಬಿಸುವ ಪ್ರಮಾಣವನ್ನು ತಗ್ಗಿಸುತ್ತದೆ. ಜತೆಗೆ ಮುಂಗೈ ಇಲ್ಲದವರಿಗೆ 'ಪ್ರಾಸ್ಥೆಟಿಕ್ ಆರ್ಮ್' ಅಭಿವೃದ್ಧಿಪಡಿಸಿದೆ.


Fully Editable Text
Free Fonts Used
HEALTH

# Govt orders probe into 'kidney racket' at Delhi hospital

**KALYAN RAY**
NEW DELHI, DHNS

The Union government on Tuesday asked Delhi health authorities to probe a UK-media report of an illegal kidney transplant racket functioning at the Apollo Hospital in Delhi involving a top surgeon, even as the hospital denied any wrongdoings.

The National Organ and Tissue Transplantation Organisation wrote to the Delhi State Organ and Tissue Transplantation Organisation to examine the allegations, take appropriate action, and submit a report within a week.

The order from the apex organ transplantation authority comes a day after the UK-based newspaper, *The Telegraph*, published an investigative report on a cash-for-kidney scam thriving at one of India's top private hospitals in which poor people from Myanmar give their kidneys in exchange for money for rich patients.

The state authority was asked to investigate, as per the Transplantation of Human Organs and Tissue Act of 1994, which allows only family members to donate kidneys.

The report names Sandeep Guleria as the surgeon who carried out the transplants, but the doctor denied any knowledge of such illegal activities, as identified by the newspaper, which also reported that no evidence was found to contradict Guleria.

In a statement, Apollo Hospital's parent company, Indraprastha Medical Corporation Limited said, "The allegations made in the international media against IMCL are absolutely false, ill-informed and misleading."

"The IMCL complies with every legal and ethical requirement for the transplant procedures, including all guidelines laid down by the government as well as our own extensive internal processes that exceed compliance requirements," it added.

### ಸೆಲ್ಕೋ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಹರೀಶ್ ಹಂದೆ ಅಭಿಮತ

# ಆರೋಗ್ಯ ನೋಡಲ್ ಕೇಂದ್ರ ಸ್ಥಾಪನೆ ಗುರಿ

**ಬೆಂಗಳೂರು:** ಸುಸ್ಥಿರ ಆರೋಗ್ಯ ಸೇವೆಗಳು ತಲುಪದ ಜಗತ್ತಿನ ಲಕ್ಷಾಂತರ ಜನರಿಗೆ 2028ರ ವೇಳೆಗೆ ಆರೋಗ್ಯ ಸೇವೆಗಳನ್ನು ಸುಲಭವಾಗಿ ಕೈಗೆಟುಕುವಂತೆ ಮಾಡುವ ನಿಟ್ಟಿನಲ್ಲಿ ಈಗಿನ ಮಿತಿಗಳನ್ನು ಮೀರುವ ಮೂಲಕ ಗಡಿಗಳನ್ನು ತಳ್ಳೋಣ ಎಂದು ಸೆಲ್ಕೋ ಫೌಂಡೇಷನ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಹರೀಶ್ ಹಂದೆ ಪ್ರತಿಪಾದಿಸಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆಯ ಉಸ್ತುವಾರಿಯಲ್ಲಿ, ಐಕೆಇಎ ಫೌಂಡೇಷನ್, ಗವಿ, ಇರೆನಾ, ಡೂನ್ ಫೌಂಡೇಷನ್ ಮತ್ತು ಗುಡ್ ಎನರ್ಜಿ ಸಂಸ್ಥೆಗಳ ಸಹಯೋಗದಲ್ಲಿ ದುಬೈನಲ್ಲಿ ನಡೆಯುತ್ತಿರುವ ಕಾಪ್-28 ವಾರ್ಷಿಕ ಶೃಂಗದ ನೀಲಿ ವಲಯ (ಬ್ಲೂ ಝೋನ್)ದಲ್ಲಿ ನಡೆದ 'ಆರೋಗ್ಯ ಸೇವೆಗಳಿಗಾಗಿ ಇಂಧನ' ಎಂಬ ಗೋಷ್ಠಿ ಉದ್ಘಾಟಿಸಿ ಮಾತನಾಡಿ, 2028ರ ಹೊತ್ತಿಗೆ ಭಾರತದ 12 ರಾಜ್ಯಗಳಲ್ಲಿ ಸೆಲ್ಕೋ ಮತ್ತು ಐಕೆಇಎ ಫೌಂಡೇಷನ್ ಸಹಭಾಗಿತ್ವದಲ್ಲಿ ಸೌರಶಕ್ತಿಯ 25 ಸಾವಿರ ಆರೋಗ್ಯ ನೋಡಲ್ ಕೇಂದ್ರಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ. ಮುಂದಿನ 5 ವರ್ಷಗಳಲ್ಲಿ ಆಫ್ರಿಕಾದಲ್ಲಿ 10,000 ಕ್ಕೂ ಹೆಚ್ಚು ಆರೋಗ್ಯ ಕೇಂದ್ರಗಳ ಬಲವರ್ಧನೆಗೆ ಸೆಲ್ಕೋ ಫೌಂಡೇಷನ್, ವಿಶ್ವ ಆರೋಗ್ಯ ಸಂಸ್ಥೆ ಮತ್ತು ಇಂಟರ್ ನ್ಯಾಷನಲ್ ರಿನ್ಯೂವಬಲ್ ಎನರ್ಜಿ ಏಜೆನ್ಸಿ ಯೊಂದಿಗೆ ಕೆಲಸ ಮಾಡಲಿದೆ ಎಂದು




ಕಾಪ್-28 ವಾರ್ಷಿಕ ಶೃಂಗದಲ್ಲಿ ಸೆಲ್ಕೋ ಫೌಂಡೇಷನ್ ಸಿಇಒ ಹರೀಶ್ ಹಂದೆ, ವಿಶ್ವ ಆರೋಗ್ಯ ಸಂಸ್ಥೆಯ ಡೈರೆಕ್ಟರ್ ಜನರಲ್ ಟೆಡ್ರೋಸ್ ಅಧಾನೋಮ್, ಯುನಿಸೆಫ್ ನ ಉಪ ಕಾರ್ಯನಿರ್ವಾಹಕ ನಿರ್ದೇಶಕ ಕಿಟ್ಟಿ ವ್ಯಾನ್ ಡೆರ್ ಹೈಜ್ಡೆನ್ ಮತ್ತಿತರರು.

> ಈ ಮಹತ್ವಾಕಾಂಕ್ಷೆಯ ಯೋಜನೆ ಕೈಗೆತ್ತಿಕೊಳ್ಳಲು ಡೂನ್ ಮತ್ತು ಗುಡ್ ಎನರ್ಜಿಸ್ ಫೌಂಡೇಷನ್‌ಗಳು ಹಾಗೂ ಹಲವು ವರ್ಷಗಳಿಂದ ನಿರಂತರ ಪ್ರೋತ್ಸಾಹ ನೀಡುತ್ತಿರುವ ಆಸ್ಪೆನ್ ಸಂಸ್ಥೆಯ ಉಪಾಧ್ಯಕ್ಷೆ ರಿಚೆಂಡಾ ವ್ಯಾನ್ ಲೀವೆನ್ ಅವರ ಶ್ರಮವಿದೆ.
>
> **-ಡಾ. ಹರೀಶ್ ಹಂದೆ , ಸೆಲ್ಕೋ ಫೌಂಡೇಷನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ**

ತಿಳಿಸಿದರು. ಈ ಗೋಷ್ಠಿಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಡೈರೆಕ್ಟರ್ ಜನರಲ್ ಟೆಡ್ರೋಸ್ ಅಧಾನೋಮ್, ಯುನಿಸೆಫ್ ನ ಉಪ ಕಾರ್ಯನಿರ್ವಾಹಕ ನಿರ್ದೇಶಕ ಕಿಟ್ಟಿ ವ್ಯಾನ್ ಡೆರ್ ಹೈಜ್ಡೆನ್ ಮುಂತಾದವರು ಭಾಗವಹಿಸಿದ್ದರು.

## ವಿಧಾನಸಭೆಯಲ್ಲಿ ವಿಧೇಯಕ ಮಂಡಿಸಿದ ಸಚಿವ ದಿನೇಶ್ ಗುಂಡೂರಾವ್

# ವೈದ್ಯರ ಹಳ್ಳಿ ಸೇವೆ ಕಡ್ಡಾಯ: ತಿದ್ದುಪಡಿ

**ವಿಶ್ವವಾಣಿ ಸುದ್ದಿಮನೆ** ವಿಧಾನಸಭೆ, ಸುವರ್ಣಸೌಧ

ರಾಜ್ಯದಲ್ಲಿ ಎಂಬಿಬಿಎಸ್ ಪೂರ್ಣಗೊಳಿಸಿದ ಪ್ರತಿಯೊಬ್ಬರು ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಬೇಕೆಂಬ ಕಾಯಿದೆಗೆ ರಾಜ್ಯ ಸರಕಾರ ತಿದ್ದುಪಡಿಸಲು ತರಲು ಮುಂದಾಗಿದ್ದು, ಮಂಗಳವಾರ ಈ ಕುರಿತು ತಿದ್ದುಪಡಿ ವಿಧೇಯಕ ಮಂಡಿಸಲಾಗಿದೆ. ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ವಿಧೇಯಕವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಂಡಿಸಿದರು. ತಿದ್ದುಪಡಿ ವಿಧೇಯಕದಲ್ಲಿ ಪ್ರಮುಖವಾಗಿ, ಗ್ರಾಮೀಣ ಸೇವೆ ಸಲ್ಲಿಸಬೇಕು ಎನ್ನುವ ಬದಲು ಅಸ್ತಿತ್ವದಲ್ಲಿರುವ ಖಾಲಿ ಹುದ್ದೆಯಲ್ಲಿ ವೈದ್ಯರು ಕಾರ್ಯನಿರ್ವಹಿಸಬೇಕು ಎಂದು ತಿದ್ದುಪಡಿ ತರಲು ತೀರ್ಮಾನಿಸಲಾಗಿದೆ.

ಕೆಲ ವರ್ಷಗಳ ಹಿಂದೆ ಗ್ರಾಮೀಣ ಭಾಗದಲ್ಲಿ ಕಡ್ಡಾಯ ಸೇವೆ ಎನ್ನುವ ಕಾನೂನು ತರಲಾಗಿತ್ತು. ಆದರೆ ಇದರಿಂದ ಗ್ರಾಮೀಣ ಭಾಗದಲ್ಲಿ ವೈದ್ಯರ ಸಂಖ್ಯೆ ಹೆಚ್ಚಾಗಿ, ನಗರ ಭಾಗದ ಆಸ್ಪತ್ರೆಯಲ್ಲಿ ಕೊರತೆ ಕಾಣಿಸಿಕೊಂಡಿತ್ತು. ಇದರಿಂದ ನಗರ ಭಾಗದ ಸರಕಾರಿ ಆಸ್ಪತ್ರೆಯಲ್ಲಿ ಹಲವು ಸಮಸ್ಯೆಯಾಗಿದ್ದರಿಂದ ಇದೀಗ, ಈ ಕಾಯಿದೆಗೆ ತಿದ್ದುಪಡಿ ತರಲಾಗಿದೆ. ಕಡ್ಡಾಯ ಸೇವೆಯನ್ನು ಕೇವಲ ಗ್ರಾಮೀಣ ಭಾಗಕ್ಕೆ ಮಾತ್ರ ಸೀಮಿತಗೊಳಿಸದೇ, ರಾಜ್ಯ ಸರಕಾರ ನಿರ್ದಿಷ್ಟಪಡಿಸಿರುವ ಖಾಲಿ ಹುದ್ದೆಯಲ್ಲಿ ಸೇವೆ ಸಲ್ಲಿಸಬೇಕು ಎಂದು ಹೇಳಲಾಗಿದೆ. ರಾಜ್ಯದಲ್ಲಿ ಎಂಬಿಬಿಎಸ್ ಪೂರ್ಣಗೊಳಿಸಿರುವ ವೈದ್ಯಕೀಯ ವಿದ್ಯಾರ್ಥಿಗಳು ಎಂಡಿ ಪಡೆದ ಬಳಿಕ ಕಡ್ಡಾಯವಾಗಿ ಸರಕಾರಿ ಸೇವೆ ಸಲ್ಲಿಸಬೇಕು ಎನ್ನುವ ಕಾನೂನಿದೆ. ಆದರೆ ಇದೀಗ ರಾಜ್ಯ ಮತ್ತು ಕೇಂದ್ರ ಸರಕಾರದ ಸೇವೆಗೆ ಆಯ್ಕೆಯಾದರೆ ಅಂತಹ ವಿದ್ಯಾರ್ಥಿಗಳನ್ನು ಕಡ್ಡಾಯ ಸೇವೆಯಿಂದ ವಿನಾಯಿತಿ ನೀಡುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

### ಸಂಬಳ ನಿಗದಿ

ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಒಂದು ವರ್ಷಗಳ ಕಾಲ ಸರಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಬೇಕು. ಅವರನ್ನು ಸಿನಿಯರ್ ರೆಸಿಡೆಂಟ್ ಎಂದು ಗುರುತಿಸಿ, ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ತಜ್ಞ ವೈದ್ಯ ಕನಿಷ್ಠ ಸಂಬಳಕ್ಕಿಂತ ನೂರು ರು. ಕಡಿಮೆಗೆ ಸಮನಾಗಿ ವೃತ್ತಿ ವೇತನ ನೀಡಬೇಕು ಎಂದು ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ.

# ನಂ.2 ಪುಣೆ, 3-ಹೈದರಾಬಾದ್ ಅಪರಾಧ ಪ್ರಕರಣ: ದೇಶದ ಅತಿ ಸುರಕ್ಷಿತ ನಗರ ಕೋಲ್ಕತ್ತ




**ದೆಹಲಿ:** ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತ ನಗರ ಸತತ 3ನೇ ವರ್ಷವೂ ದೇಶದ ಅತ್ಯಂತ ಸುರಕ್ಷಿತ ನಗರಗಳ ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿದೆ. 2022ರಲ್ಲಿ ದೇಶದ ಮಹಾ ನಗರಗಳಲ್ಲಿ ಪ್ರತಿ 1 ಲಕ್ಷ ಜನಸಂಖ್ಯೆಗೆ ಕನಿಷ್ಠ ಸಂಖ್ಯೆ (86.5 ಕಾಗ್ನಿಸಬಲ್) ಅಪರಾಧಗಳು ಈ ನಗರದಲ್ಲಿ ದಾಖಲಾಗಿವೆ. ಆದರೆ, ಕೋಲ್ಕತ್ತದಲ್ಲಿ ಮಹಿಳೆಯರ ವಿರುದ್ಧದ ಅಪರಾಧಗಳ ಸಂಖ್ಯೆ 2021ರಲ್ಲಿ 1,783ರಷ್ಟು ಇದ್ದುದು 2022ರಲ್ಲಿ 1,890ಕ್ಕೆ ಏರಿಕೆಯಾಗಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ) ಮಂಗಳವಾರ ವರದಿ ಪ್ರಕಟಿಸಿದೆ. 20 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವ 19 ನಗರಗಳ ಹೋಲಿಕೆ ನಂತರ ಶ್ರೇಯಾಂಕ ನೀಡಲಾಗಿದೆ.

ಕಡಿಮೆ ಅಪರಾಧ ದಾಖಲು ಪಟ್ಟಿಯಲ್ಲಿ ನಂತರದ ಸ್ಥಾನದಲ್ಲಿ ಮಹಾರಾಷ್ಟ್ರದ ಪುಣೆ ನಗರವಿದೆ. ಇಲ್ಲಿನ ಸರಾಸರಿ ಪ್ರಕರಣಗಳ ಸಂಖ್ಯೆ 280.7ರಷ್ಟಿವೆ. 3ನೇ ಸ್ಥಾನದಲ್ಲಿ ತೆಲಂಗಾಣ ರಾಜಧಾನಿ ಹೈದರಾಬಾದ್ ನಗರವಿದೆ. ಇಲ್ಲಿ ಸರಾಸರಿ ಪ್ರಕರಣಗಳ ಸಂಖ್ಯೆ 299.2 ಇದೆ. ಭಾರತೀಯ ದಂಡ ಸಂಹಿತೆ(ಐಪಿಸಿ) ಮತ್ತು ವಿಶೇಷ ಮತ್ತು ಸ್ಥಳೀಯ ಕಾನೂನುಗಳ ಸೆಕ್ಷನ್‌ಗಳಡಿ ದಾಖಲಾಗುವ ಪ್ರಕರಣಗಳು ಕಾಗ್ನಿಸಬಲ್ ಅಪರಾಧಗಳಾಗಿವೆ. ಎನ್‌ಸಿಆರ್‌ಬಿ ವರದಿ ಪ್ರಕಾರ, ಕೋಲ್ಕತ್ತ ಮಹಾನಗರ 2021ರಲ್ಲಿ ಪ್ರತಿ ಲಕ್ಷ ಜನರಿಗೆ 103.4 ಅಪರಾಧ ಪ್ರಕರಣ ದಾಖಲಿಸಿದೆ. 2020ರಲ್ಲಿ 129.5 ಪ್ರಕರಣಗಳಷ್ಟಿತ್ತು.





## ಮನಸ್ಸೇ ರಿಲ್ಯಾಕ್ಸ್

● ಡಾ. ಎನ್ ಜಯರಾಮ ಶೆಟ್ಟಿ

ಉತ್ಸಾಹ ಶಬ್ದದ ಇಂಗ್ಲಿಷ್ ಅರ್ಥ 'ಎಂಥುಸಿಯಾಸಮ್' ನಲ್ಲಿ ಇರುವ 'ಎಂಥು' ಎಂದರೆ ಗ್ರೀಕ್ ಭಾಷೆಯಲ್ಲಿ ದೇವರಂತೆ! ಎಷ್ಟೊಂದು ಪ್ರೇರಣಾತ್ಮಕ ವಿಚಾರವಿದು-ಉತ್ಸಾಹಿಯೊಳಗೆ ದೇವರಿರುವುದೆಂದರೆ! ಜೀವನದಲ್ಲಿ ಉತ್ಸಾಹ ಮೂಡಿಸಿಕೊಳ್ಳುವ ಜವಾಬ್ದಾರಿ ನಮ್ಮದೇ. ಉತ್ಸಾಹವೆನ್ನುವುದು ಯಾವುದರ ಮೇಲೂ ಅವಲಂಬಿತವಾಗಿಲ್ಲ, ಅದು ಸ್ವಯಂ ಚಾಲಿತ ಮತ್ತು ಸ್ವಯಂ ಸಾಧಕ. ಅಧಿಕಾರ, ಸ್ಥಾನಮಾನ, ಧನ ದೌಲತ್ತಿನಿಂದ ಕೊಳ್ಳುವಂತಿದ್ದರೆ, ಅದನ್ನು ಹೊಂದಿದ್ದವರಿಗೆ ಉತ್ಸಾಹ ಭರಪೂರ ಇರಬೇಕಿತ್ತಲ್ಲ? 'ಉತ್ಸಾಹದಿಂದಲೇ ಉಳಿದೆಲ್ಲವು' ಎನ್ನುವ ವಿಲಿಯಂ ಬ್ಲೇಕ್‌ರವರ ಮಾತು ಇಲ್ಲಿ ಪ್ರಸ್ತುತ. ಉತ್ಸಾಹ ಅನ್ನುವ ಸ್ಥಿತಿಯೇ ಹಾಗೆ. ಅದರ ನಟನೆ ಕೂಡಾ ಅದರಲ್ಲೇ ಕೊನೆಗೊಳ್ಳುತ್ತದಂತೆ.

ಭಾವನಾ ವಾತಾವರಣ: ಉತ್ಸಾಹ ಒಂದು ಗುಣ, ಸ್ಥಿತಿ ಮತ್ತು ನಿರ್ಧಾರದ ಇನ್ನೊಂದು ರೂಪ. ಎಲೆಗೆ ಹಸಿರು ಬಣ್ಣ, ಉಸಿರಿಗೆ ತಾದಾತ್ಮ್ಯತೆ ಎಷ್ಟು ಸಹಜವೊ, ಮನಸ್ಸು ಸಂತಸ ಮತ್ತು ಉತ್ಸಾಹ ಬಯಸುವುದು ಅಷ್ಟೆ ಸತ್ಯ. ಮನೆಯೊಳಗೆ ಕೂಡಿ ಹಾಕಿಕೊಂಡಿರುವವರು, ಸ್ವಲ್ಪ ಆಚೆಗೆ ಬಂದು ಅಡ್ಡಾಡಿದಾಗ ಮನಸ್ಸು ಪ್ರಸನ್ನಗೊಳ್ಳುವುದಿಲ್ಲವೆ? ಹಸಿರಿನ ವಾತಾವರಣ ಬೇಗುದಿಯನ್ನು ತಣಿಸುವುದಿಲ್ಲವೆ? ನಿರಾಳವಾಗಿ ಇಷ್ಟಪಟ್ಟ ಪುಸ್ತಕವೊಂದನ್ನು ಓದುವ ಅವಕಾಶದ ಯೋಚನೆಯೇ ಸಾಕಲ್ಲವೆ? ಇಂತಹ ವಾತಾವರಣ ಮತ್ತು ಅನುಕೂಲತೆಗಳನ್ನು ನಾವೇ ಜೋಡಿಸಿಕೊಂಡು ಉಲ್ಲಸಿತರಾಗಬಹುದಲ್ಲವೆ? ಅದಕ್ಕೇನು ಕಷ್ಟ, ಅದಕ್ಕೆಷ್ಟು ಖರ್ಚು? ಉತ್ಸಾಹದ ಸ್ಥಿತಿ ಅವಕಾಶಗಳನ್ನು ಅವಾಹಿಸಿಕೊಳ್ಳುತ್ತದೆ. ಇದಕ್ಕೆ ಯಾರ ವಶೀಲಿ, ಅನುಮೋದನೆ ಬೇಕಿಲ್ಲ.

### ತಕ್ಕನಾದ ವಾತಾವರಣ

ಸರಣಿಗಟ್ಟಲೆ ಉಕ್ಕು ಕಾರ್ಖಾನೆಗಳ ಮಾಲಿಕರಿಗೆ ಪತ್ರಿಕೆ ಸಂಪಾದಕರೊಬ್ಬರು ಹೀಗೆ ಪ್ರಶ್ನಿಸಿದ್ದರು, 'ನೀವು ಇಷ್ಟೊಂದು ದೊಡ್ಡ ಮೊತ್ತವನ್ನು ಗಳಿಸುತ್ತಿರುವುದು ಶ್ರೇಷ್ಟ ಉಕ್ಕು ಉತ್ಪಾದಕರಾದುದಕ್ಕಷ್ಟೇ? ಉದ್ಯಮಿ ಕೊಟ್ಟ ಉತ್ತರ ಗಮನಿಸಿ. 'ಖಂಡಿತ ಅಲ್ಲ. ನಾನು ಇಷ್ಟು ಗಳಿಸುತ್ತಿರುವುದು, ನಾನು ನನ್ನ ಕೆಲಸಗಾರರ ಉತ್ಸಾಹ ಮಟ್ಟವನ್ನು ಕಾಪಾಡಿಕೊಂಡು ಅವರಿಂದ ನಿರ್ವಹಣೆ ಪಡೆದುದಕ್ಕಾಗಿ'. ಇಂದು ಕೆಲಸ ಕ್ಷೇತ್ರಗಳಲ್ಲಿ ನೌಕರರು ಉತ್ಸಾಹದಿಂದ ನಿರ್ವಸುವಂತಾಗಲು ತಕ್ಕ ವಾತಾವರಣದತ್ತ ಗಮನ ಕೊಡಲಾಗುತ್ತಿದೆ. ನಿರಂತರ ಉತ್ಸಾಹ ಬುಗ್ಗೆಯ ತಾಣ ಪ್ರತಿ ವ್ಯಕ್ತಿಯಲ್ಲಿದ್ದರೂ ಅದರ ಅರಿವೇ ಇಲ್ಲದವರಂತೆ ಅವರ ನಡವಳಿಕೆ ಎದ್ದು ಕಾಣುತ್ತದೆ. ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ನಮ್ಮ ಭಾಗವಹಿಸುವಿಕೆ ಏಕತಾನತೆಯಿಂದ ಬಿಡುಗಡೆ ಹೊಂದಬೇಕು. ಸಾರ್ವಜನಿಕ ಭಾಷಣಕಾರರಿಗೆ ಕೇಳಿ ನೋಡಿ. ಸಭಿಕರಿಂದ ಲವಲವಿಕೆಯ ಪ್ರತಿಕ್ರಿಯೆ ಮುಂಚಿನಂತಿಲ್ಲ. ಯಾರಿಗೂ ಪ್ರಸಂಸೆ ಕೊಡದ, ಯಾರಿಂದಲೂ ಪ್ರಸಂಸೆ ಬಯಸದಿರುವ ರೋಬೊ ಪ್ರಜ್ಞೆ ನಮಗೆ ಒಳ್ಳೆಯದಲ್ಲ. ಕುಟುಂಬ ವಲಯಗಳಲ್ಲಿ ಸದಸ್ಯರು ಒಟ್ಟಿಗೆ ಸೇರುವ, ಆಡುವ, ಊಟ ಮಾಡುವ ಪ್ರಮೇಯಗಳು ಕಡಿಮೆಯಾಗುತ್ತಿವೆ. ಉತ್ಸಾಹದಿಂದಿರುವುದು ನಮ್ಮ ಸಹಜ ಪ್ರವೃತಿಯಾಗಿದ್ದರೂ ನಾವು ಅದರಿಂದ ವಂಚಿತರಾಗಿದ್ದೇವೆ. ಅಂತಹ ಪ್ರಜ್ಞೆಯನ್ನು ಮರಳಿ ಪಡೆಯುವುದು ಹೇಗೆ?

### 'ಸೂಪರ್ ಇಂಪೋಸಿಂಗ್' ತಂತ್ರ

ಚಿಂತೆ ಉತ್ಸಾಹಕ್ಕೆ ಮಾರಕ. ಆಂತೆಯಿಂದಲೇ ಸಾಧ್ಯವಾದದ್ದು ಯಾವುದೂ ಇಲ್ಲ. ಸಮಸ್ಯೆಗಳ ಆಯುಷ್ಯ ಕ್ಷೀಣವಾದದ್ದು. ಚಿಂತೆಯನ್ನು ಹುಟ್ಟಿಸುವ ಯೋಚನೆಗಳನ್ನು ಉತ್ಸಾಹ ಪೂರಿತ ಯೋಚನೆಗಳಿಂದಲೇ ಮುಚ್ಚಿಹಾಕುವ 'ಸೂಪರ್ ಇಂಪೋಸಿಂಗ್' ತಂತ್ರ ಇಂದು ಹೆಚ್ಚಾಗಿ ಬಳಕೆಯಲ್ಲಿವೆ.

ನಿನ್ನೆ ನಾಳೆಗಳಿಗಿಂತ ಈ ದಿನ ಸುದಿನವೆಂದು ನಾವು ಯೋಚಿಸಬೇಕು. ನಿಮ್ಮ ಯೋಚನಾ ಕ್ರಮಗಳನ್ನು ಗಮನಿಸಿ. ಕೆಲವೊಮ್ಮೆ ಹಿಂದಿನ ಘಟನೆಗಳನ್ನು ಮೆಲುಕುಹಾಕುವ ಮನಸ್ಸು, ಮಗದೊಮ್ಮೆ ನಾಳೆಯ ಚಿಂತೆಗಳತ್ತ ಹೊರಳುತ್ತದೆ. ವರ್ತಮಾನದಲ್ಲಿ ತೊಡಗುವ ಮನಸ್ಸಿನಲ್ಲಿ ಲವಲವಿಕೆ, ಕ್ರಿಯಾಶೀಲತೆ ತುಂಬಿರಲು ಸಾಧ್ಯವಿದೆ. ಮನಸ್ಸು ಮರ್ಕಟದಂತೆ ಕುಣಿದಾಡಬಹುದು. ಅಭ್ಯಾಸ ಮತ್ತು ಸ್ವಯಂ ಶಿಸ್ತಿನಿಂದ ಅನವಶ್ಯಕ ಚಿಂತೆಗಳಿಂದ ಮನಸ್ಸನ್ನು ಹಗುರಗೊಳಿಸಬೇಕು. ಈ ಕ್ಷಣ ಮತ್ತು ಇದೀಗ ನಮ್ಮ ದೊಡ್ಡ ಬಳುವಳಿ. ಧನ್ಯತೆಯ ಬದುಕಿನಲ್ಲಿ ಜಾಡ್ಯತೆಗೆ ಅವಕಾಶಲ್ಲ. ಜಪಾನ್ ದೇಶದಲ್ಲಿ ಪರಸ್ಪರ ವಂದಿಸುವಾಗ 'ಜೀವನದಿಗೆ' ಜಯವಾಗಲೆಂದು ಹರಸುತ್ತಾರಂತೆ. ಜೀವನವೇ ಯಶಸ್ಸು ಎನ್ನುವ ಮಾತು ನಮ್ಮ ಧ್ಯೇಯ ವಾಕ್ಯವಾದಾಗ, ನಿರುತ್ಸಾಹಕ್ಕೆ ಎಡೆಯೆಲ್ಲಿ?


ಜೀವನ ಮಾರ್ಗದಲ್ಲಿ ಏರುತಗ್ಗುಗಳು, ಹಳ್ಳದಿಣ್ಣೆಗಳು ಅಲ್ಲಲ್ಲಿ ಕಂಡುಬರಬಹುದು. ಉತ್ಸಾ ಯಾತ್ರಿಕ ಇವೆಲ್ಲವನ್ನು ಸಮಚಿತ್ತದಿಂದ ಅನುಭಸಿ ಗುರಿಯತ್ತ ಸಾಗುವಂತೆ, ದೈನಂದಿನ ಬದುಕಿನಲ್ಲಿ ಬರುವ ಬಣ್ಣ-ಬವಣೆ-ಬದಲಾವಣೆಗಳನ್ನು ಉತ್ಸಾಹದಿಂದ ಎದುರುಗೊಂಡಾಗ ಪ್ರತಿದಿನ ಉತ್ಸವ ಜರುಗೀತು.





● ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಹಣವಿಲ್ಲದಿದ್ದರೂ ಬಾಳಬಹುದು. ಆರೋಗ್ಯ ಸರಿಯಿರದಿದ್ದರೆ ಎಲ್ಲವೂ ಕ್ಷಯ ! ನಿತ್ಯ ವಾಕಿಂಗ್, ವ್ಯಾಯಾಮ, ಯೋಗ , ಧ್ಯಾನ, ಸಾತ್ವಿಕ ಪೌಷ್ಟಿಕ ಆಹಾರ ಸೇವನೆ, ತರಕಾರಿ ಹೆಚ್ಚು ಉಪಯೋಗ, ಅಚಿಂತ್ಯನಾಗಿರುವಿಕೆ, ದುಶ್ಚಟಗಳಿಂದ ದೂರ ಕಾಯ್ದುಕೊಳ್ಳುವುದು ಎಲ್ಲ ಅನುಸರಿಸಿದಾಗಲೂ ಕೆಲವು ಚಿಕ್ಕಪುಟ್ಟ ಅನಾರೋಗ್ಯ ಸಮಸ್ಯೆಗಳು ತಲೆ ತಿನ್ನುವುದು ಸಹಜ. ಆಗೆಲ್ಲ ಈ ಪರಿಹಾರೋಪಾಯಗಳನ್ನು ಕೈಗೊಳ್ಳಿ.

- ಕೊಲೆಸ್ಟ್ರಾಲ್ ಹೆಚ್ಚಾದಾಗ ಒಂದೆರಡು ಚಮಚ ಹಸಿ ಮೆಂತ್ಯದ ಪುಡಿಯನ್ನು ಮಜ್ಜಿಗೆಯಲ್ಲಿ ಕಲಸಿ ಸೇವಿಸಿ.
- ವಿವಾಹ ಭೋಜನ ಸಿಕ್ಕಾಪಟ್ಟೆ ತಿಂದು ಅಜೀರ್ಣವಾದಾಗ ಪುಡಿ ಮಾಡಿದ ಕೊತ್ತಂಬರಿ ಬೀಜವನ್ನು ಮಜ್ಜಿಗೆಯೊಂದಿಗೆ ಸೇರಿಸಿ ತೆಗೆದುಕೊಳ್ಳಿ.
- ನೋವಿನಿಂದ ಬಾವು ಉಂಟಾಗಿದ್ದರೆ ಆ ಭಾಗಕ್ಕೆ ನುಗ್ಗೆಸೊಪ್ಪನ್ನು ಹುರಿದು ಅದರ ಶಾಖವನ್ನು ಕೊಡಬೇಕು.
- ಕೈ ಕಾಲುಗಳ ಕೀಲುಗಳಲ್ಲಿ ನೋವಿದ್ದರೆ ಪುಡಿ ಮಾಡಿದ ಜಾಯಿಕಾಯಿಯನ್ನು ಎಳ್ಳೆಣ್ಣೆಯಲ್ಲಿ ಬೇಯಿಸಿ ಲೇಪಿಸಿರಿ.
- ಕಜ್ಜಿ ,ತುರಿಕೆಯಿದ್ದರೆ ಮೂಲಂಗಿ ಬೀಜಗಳನ್ನು ನಿಂಬೆಹಣ್ಣಿನ ರಸದಲ್ಲಿ ಅರೆದು ಹಚ್ಚಿರಿ.
- ಅಸಿಡಿಟಿ ಸಮಸ್ಯೆಯೆನಿಸಿದ್ದಲ್ಲಿ ಶುಂಠಿ ಕಷಾಯಕ್ಕೆ ಜೋನಿಬೆಲ್ಲ ಬೆರೆಸಿ ಸೇವಿಸಿರಿ.
- ಬೆಂಡೆಕಾಯಿಯನ್ನು ಉದ್ದುದ್ದವಾಗಿ ಎರಡು ಹೋಳು ಮಾಡಿ ರಾತ್ರಿಯಿಡೀ ನೀರಿನಲ್ಲಿ ನೆನೆಸಿಟ್ಟು ಬೆಳಿಗ್ಗೆ ಅದರ ನೀರನ್ನು ಕುಡಿಯುವುದರಿಂದ ಮಧುಮೇಹ ತಹಬಂದಿಗೆ ಬರುತ್ತದೆ.
- ಅಸ್ತಮಾ ತೊಂದರೆಯಿದ್ದರೆ ಸಮ ಪ್ರಮಾಣದ ಮೆಂತೆ ಹಾಗೂ ಓಂಕಾಳನ್ನು ಬೆರೆಸಿ ಕಷಾಯ ತಯಾರಿಸಿ ಅದಕ್ಕೆ ಜೇನುತುಪ್ಪ ಸೇರಿಸಿ ನಿತ್ಯ 3 ಬಾರಿ ಕೆಲದಿನ ಸೇವಿಸಿ.
- ಛಳಿಗಾಲ, ಕಾಲುಗಳು, ಪಾದದಲ್ಲಿ ಬಿರುಕು ಕಾಣಿಸಿಕೊಂಡರೆ ಬಕೆಟ್ ಬಿಸಿನೀರಿಗೆ ಮುಷ್ಟಿ ಉಪ್ಪುಬೆರೆಸಿ ಅದರಲ್ಲಿ ಕಾಲುಗಳನ್ನಿಟ್ಟು 5 ನಿಮಿಷ ಕುಳಿತುಕೊಳ್ಳಿ.
- ತಲೆಹೊಟ್ಟಿನ ಸಮಸ್ಯೆಯಿದ್ದಲ್ಲಿ ಶಿಂಡಲೆ ಕಾಯಿಯನ್ನು ಎರಡು ಹೋಳು ಮಾಡಿ ಅದರಿಂದ ತಲೆಕೂದಲಿಗೆ ಹಚ್ಚಿ ಚೆನ್ನಾಗಿ ಉಜ್ಜಿ ಒಂದು ಗಂಟೆಯ ನಂತರ ಸ್ನಾನ ಮಾಡಿ.
- ದೇಹದ ತೂಕ ಕಡಿಮೆಯಾಗಬೇಕೇ ? ಒಂದು ಕಪ್ ಚಕೋತ ಹಣ್ಣಿನ ರಸ, ಒಂದು ಚಮಚ ಜೇನುತುಪ್ಪ, ಎರಡು ಚಮಚ ಎಪಲ್ ಸಿಡೆರ್ ವಿನೆಗರ್ ಸೇರಿಸಿ ದಿನಕ್ಕೆರಡು ಬಾರಿ ಊಟಕ್ಕೆ ಮುನ್ನ ಕುಡಿಯಿರಿ.
- ರಕ್ತಹೀನತೆಯಿದ್ದಲ್ಲಿ ಬೀಟ್ ರೂಟ್ ರಸ, ಒಣ ದ್ರಾಕ್ಷಿ, ಗರಿಕೆ ಹುಲ್ಲು ಸೇರಿಸಿ ಜ್ಯೂಸ್ ಮಾಡಿ ಕುಡಿಯಿರಿ.
- ಕಣ್ಣುಗಳು ಉರಿಯುತ್ತಿದ್ದರೆ ಸ್ವಲ್ಪ ಕೊತ್ತಂಬರಿ ಬೀಜಗಳನ್ನು ನೀರಿನಲ್ಲಿ ನೆನೆಸಿ ಬೆಳಿಗ್ಗೆ ಆ ನೀರನ್ನು ಸೋಸಿ ಅದರಿಂದ ಕಣ್ಣುಗಳನ್ನು ಮೃದುವಾಗಿ ತೊಳೆಯಿರಿ.



# ಆರೋಗ್ಯಕ್ಕೆಂದು ಸ್ವಲ್ಪ ಸಮಯ ಮೀಸಲು ಇಡಿ: ಅನ್ನದಾನಯ್ಯ



ಕವಿತಾಳ ಪಟ್ಟಣದ ಕಲ್ಮಠ ಕಲ್ಯಾಣ ಮಂಟಪದಲ್ಲಿ ಐದು ದಿನಗಳ ಯೋಗ ಚಿಕಿತ್ಸಾ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಕವಿತಾಳ: ಉತ್ತಮ ಆರೋಗ್ಯಕ್ಕೆ ಪ್ರತಿನಿತ್ಯ ಯೋಗ ಮಾಡುವುದು ಅಗತ್ಯ, ಕಾಯಿಲೆ ಬಂದ ನಂತರ ಸಮಯ ಮತ್ತು ಹಣ ಖರ್ಚು ಮಾಡುವ ಬದಲಿಗೆ ಮುಂಜಾಗ್ರತೆಯಾಗಿ ಸ್ವಲ್ಪ ಸಮಯ ನಮ್ಮ ಆರೋಗ್ಯಕ್ಕಾಗಿ ಮೀಸಲಿಟ್ಟರೆ ಆರೋಗ್ಯವಂತ ಜೀವನ ನಮ್ಮದಾಗುತ್ತದೆ ಎಂದು ಯೋಗ ಗುರು ಅನ್ನದಾನಯ್ಯ ಹೇಳಿದರು.

ಯೋಗ ಸನ್ನಿಧಿ ಜ್ಞಾನವಿದ್ಯಾಪೀಠ ಟ್ರಸ್ಟ್ ಮಾನ್ವಿ ವತಿಯಿಂದ ಪಟ್ಟಣದ ಕಲ್ಮಠ ಕಲ್ಯಾಣ ಮಂಟಪದಲ್ಲಿ ಐದು ದಿನಗಳ ಕಾಲ ಹಮ್ಮಿಕೊಂಡಿರುವ ಯೋಗ ಚಿಕಿತ್ಸಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಯೋಗದಿಂದ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಪ್ರತಿನಿತ್ಯ ಯೋಗ ಹಾಗೂ ಪ್ರಾಣಾಯಾಮ ಮಾಡಬೇಕು. ದೀರ್ಘ ಕಾಲದ ರೋಗಗಳಿಂದ ಬಳಲುತ್ತಿದ್ದರೆ ಅಂತವರಿಗೆ ವಿಶೇಷ ಯೋಗಾಸನಗಳನ್ನು ಹೇಳಿಕೊಡಲಾಗುತ್ತಿದೆ. ಶಿಬಿರದಲ್ಲಿ ಪ್ರತಿಯೊಬ್ಬರೂ ಪಾಲ್ಗೊಂಡು ಪ್ರಯೋಜನ ಪಡೆದುಕೊಳ್ಳಬೇಕು ಎಂದರು. ಸಂಗಪ್ಪ ಗೊರೆಬಾಳ, ಸುಭಾಷ್ ಚಕೋಟಿ, ಎಂ.ರಾಘವೇಂದ್ರ, ದೇವರಾಜ ನಾಗಲೀಕರ, ರಮೇಶ ಮಿಶ್ರಾ, ಸಂಗಮೇಶ ಸಾಲ್ಮನಿ, ಶಂಕರ್ ನಾಗಲೀಕರ, ಉದಯ ಕುಮಾರ ಇಲ್ಲೂರು ಶಿಬಿರದಲ್ಲಿ ಪಾಲ್ಗೊಂಡಿದ್ದರು.

**ಆರೋಗ್ಯವೇ ಭಾಗ್ಯ** ಮಕ್ಕಳಿಗೆ ಅಪೌಷ್ಟಿಕತೆ ಅರಿವು ಕಾರ್ಯಕ್ರಮಕ್ಕೆ ವಲ್ಲಭ ಭಟ್ ಚಾಲನೆ

# ಮಕ್ಕಳ ಉತ್ತಮ ಆರೋಗ್ಯವೇ ದೇಶಕ್ಕೆ ಬುನಾದಿ

• **ಕನ್ನಡಪ್ರಭ ವಾರ್ತೆ** ಸುರಪುರ

ಮಕ್ಕಳಿಗೆ ಸಮಾಜದಲ್ಲಿ ಉತ್ತಮ ಜೀವನವನ್ನು ರೂಪಿಸಿಕೊಡಬೇಕು. ದೇಶ ಅಭಿವೃದ್ಧಿ ಹೊಂದಲು ಮಕ್ಕಳ ಆರೋಗ್ಯ ಮುಖ್ಯವಾಗಿದೆ. ಮಕ್ಕಳ ಉತ್ತಮ ಆರೋಗ್ಯವೇ ದೇಶಕ್ಕೆ ಭದ್ರ ಬುನಾದಿಯಾಗಿದೆ ಎಂದು ಬೈಫ್ ಸಂಸ್ಥೆ ಜಿಲ್ಲಾ ಕಾರ್ಯಾಧಿಕಾರಿ ವಲ್ಲಭ ಭಟ್ ಹೇಳಿದರು.

ತಾಲೂಕಿನ ದೇವಾಪುರ ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಬೈಫ್ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಭಾರತ ಸರ್ಕಾರ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತು ಬೆಂಗಳೂರು ಆಶ್ರಯದಲ್ಲಿ 3 ಮತ್ತು 7ನೇ ತರಗತಿ ಮಕ್ಕಳಿಗೆ ಅಪೌಷ್ಟಿಕತೆ ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು.

ಈ ವೇಳೆ ವಲ್ಲಭ ಭಟ್ ಮಾತನಾಡಿ, ಮಕ್ಕಳು ಆರೋಗ್ಯವಾಗಿರಲು ಸಮತೋಲನ ಆಹಾರ ಸೇವಿಸಬೇಕು. ನಿತ್ಯ ಸರಿಯಾದ ಸಮಯಕ್ಕೆ ಊಟ ಮಾಡಬೇಕು. ಉತ್ತಮ ಆಹಾರ ಆಯ್ಕೆ ಮಾಡಿಕೊಳ್ಳಬೇಕು ಎಂದರು.



**ಸುರಪುರ ತಾಲೂಕಿನ ದೇವಾಪುರ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ನಡೆದ ಮಕ್ಕಳಿಗೆ ಅಪೌಷ್ಟಿಕತೆ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.**

ಶಾಲೆ ಮುಖ್ಯ ಶಿಕ್ಷಕಿ ಲಕ್ಷ್ಮೀದೇವಿ ಮಾತನಾಡಿ, ಮಕ್ಕಳು ದಿನಾಲು ಉತ್ತಮ ಆಹಾರವನ್ನು ಸೇವಿಸಬೇಕು. ಹೊರಗಡೆ ಸಿಗುವ ಉರಿದ ಕರಿದ ಪದಾರ್ಥ ಸೇವಿಸಬಾರದು ಎಂದರು.

ನಂತರ ಬೈಫ್ ಸಂಸ್ಥೆಯಿಂದ ಮಕ್ಕಳಿಗೆ ಅಪೌಷ್ಟಿಕತೆಯಿಂದ ಆಗುವ ತೊಂದರೆಯ ಬಗ್ಗೆ ವಿಡಿಯೋ ಮತ್ತು ಸ್ಥಳೀಯವಾಗಿ ಲಭ್ಯವಿರುವ ಹಣ್ಣು, ತರಕಾರಿ, ಬೇಳೆಕಾಳು ಬಳಸಿಕೊಂಡು ಹೇಗೆ ಪೌಷ್ಟಿಕ ಆಹಾರ ತಯಾರಿಸುವುದು ಎಂಬುವುದನ್ನು ತೋರಿಸಲಾಯಿತು.

ಅಪೌಷ್ಟಿಕತೆಯ ವರ್ತುಲ, ರಕ್ತಹೀನತೆ, ನಿಶ್ಯಕ್ತಿ ಮತ್ತು ಅನಾರೋಗ್ಯಕ್ಕೆ ಕಾರಣಗಳು, ಬಾಲಕಿಯರ ಮತ್ತು ಬಾಲಕರ ಪೋಷಣೆ ಮತ್ತು ಉತ್ತಮ ಆರೋಗ್ಯಕ್ಕೆ ಪೌಷ್ಟಿಕ ಆಹಾರಗ ಸೇವನೆ. ಸೂಕ್ತ ನೈರ್ಮಲ್ಯ, ಸ್ವಚ್ಛ ಭಾರತ ಅಭಿಯಾನದ ಕಿರು ಚಿತ್ರ ತೋರಿಸುತ್ತಾ ಮಕ್ಕಳಿಗೆ ವಿವರಿಸಲಾಯಿತು.

ಸಿಆರ್‌ಪಿ ನಿಂಗಣ್ಣ, ಶಿಕ್ಷಕರಾದ ನಾಗರತ್ನ, ದೇವಿಂದ್ರಮ್ಮ, ಗಂಗಾಧರ, ಸಂಸ್ಥೆ ಪದಾಧಿಕಾರಿಗಳಾದ ಸ್ವಾತಿ ಹೀರೆಮಠ, ಜ್ಞಾನಸುಂದರಿ, ಹಣಮಂತ ಅಂಬಿಗೇರ ಸೇರಿ ಇತರರಿದ್ದರು.

# ದುರ್ಬಲ ಮನಸ್ಸಿನಿಂದ ಕ್ಷೀಣಿಸುವ ಹುಮ್ಮಸ್ಸು, ಆಯಸ್ಸು

'ಸರ್ ನಾನು ಕುಡಿಯೋದು ಬಿಟ್ಟು 3 ವರ್ಷ ಆಗಿತ್ತು. ಆದರೆ ಮೊನ್ನೆ ನಮ್ಮ ಟೀಂ ಇಂಡಿಯಾ ವಿಶ್ವ ಕಪ್ ಫೈನಲ್ ಸೋತಾಗ ಮನಸ್ಸಿಗೆ ಬಹಳ ಬೇಸರ ಆಯ್ತು. ಇದೇ ಬೇಸರದಲ್ಲಿ ಮತ್ತೆ ಕುಡಿದೆ. ಕ್ರಿಕೆಟ್ ಅಂದರೆ ನನಗೆ ಪ್ರಾಣ. ಅದೂ ಫೈನಲ್‌ವರೆಗೆ ಬಂದು ಸೋಲು ಅನುಭವಿಸಿದಾಗ ನನಗಾದ ಬೇಸರ ಅಷ್ಟಿಷ್ಟಲ್ಲ. ಈಗ ಅದಾದ ನಂತರವೂ ಮತ್ತೆ ಕುಡಿತದ ವ್ಯಸನ ಶುರುವಾಗಿದೆ. ಇದರಿಂದ ಮತ್ತೆ ಕುಟುಂಬದ ನೆಮ್ಮದಿ ಮತ್ತು ಮನಶ್ಶಾಂತಿ ಹಾಳಾಗುತ್ತಿದೆ, ಏನು ಮಾಡಲಿ ಸರ್...?'

ಇವು 32 ವಯಸ್ಸಿನ ಯುವಕ ಮೊನ್ನೆ ಮೊನ್ನೆಯಷ್ಟೇ ಬಂದು ನನ್ನ ಬಳಿ ಹೇಳಿಕೊಂಡ ಮಾತುಗಳು. ಆತನ ಮಾತಿನಲ್ಲಿ ಪಶ್ಚಾತ್ತಾಪದ ಛಾಯೆ ಇತ್ತು. ಜತೆಗೆ ಮತ್ತೆ ಕುಡಿದೆ ಎಂಬ ತಪ್ಪೊಪ್ಪಿಗೆಯುಕ್ತ ಸತ್ಯವೂ ಇತ್ತು. ಮೇಲಾಗಿ ಆತನಿಗೆ ನೆಮ್ಮದಿ ಹಾಳಾಗಿದ್ದರ ಅರಿವೂ ಇತ್ತು. ಇಷ್ಟೆಲ್ಲಾ ಅರಿವು ಇದ್ದರೂ ಈತ ಆ ಕುಡಿತದ ಮೊರೆ ಹೋಗಿದ್ದು ಹೇಗೆ ಮತ್ತು ಏಕೆ? ಎಂದು ಹುಡುಕಿ ಹೊರಟರೆ ಸಿಗುವ ಉತ್ತರ ಮನೋದೌರ್ಬಲ್ಯ. ಹೌದು ಈ ಮನಸ್ಸು ಎಂಬುದರ ಶಕ್ತಿಯೇ ಹಾಗೆ- ಅಪರಿಮಿತ ಮತ್ತು ಅನಂತ. ಆದರೆ ಅದರ ಸದ್ಬಳಕೆ ಮತ್ತು ನಿಗ್ರಹ ಬಲು ಮುಖ್ಯ. 'ಮನ ಏವ ಕಾರಣಂ ಬಂಧ ಮೋಕ್ಷಯೋ' ಎಂಬಂತೆ ನಮ್ಮೆಲ್ಲ




ಡಾ. ಆನಂದ ಪಾಂಡುರಂಗಿ ಖ್ಯಾತ ಮನೋವೈದ್ಯರು
ದೂ: (0836) 2773878, drpandurangi@yahoo.com

ಸುಖ-ದುಃಖಕ್ಕೆ, ನೋವು-ನಲಿವಿಗೆ ಈ ಮನಸ್ಸೇ ಕಾರಣ. ಅದಕ್ಕೆ ನಮ್ಮ ಹಿರಿಯರು ಹಿಂದೆ 'ನೀ ಮನಸ್ಸು ಮಾಡಿದರೆ ಗುಡ್ಡಾನೆ ಎತ್ತಿ ತಂದು ಇಡುವೆ' ಎನ್ನುತ್ತಿದ್ದರು. ಸಂಕಲ್ಪ ಮತ್ತು ಧೀ ಶಕ್ತಿಯ ಸಂಗಮವಾದ ಮನಸ್ಸು ಅಷ್ಟೇ ಚಂಚಲವೂ ಹೌದು. ಈಗ ನನ್ನ ಬಳಿ ಬಂದ ಯುವಕನ ಸ್ಥಿತಿ ಹಾಗಾಗಲು ಕಾರಣವೂ ಈ ಚಂಚಲತೆಯೇ.

ಇಲ್ಲಿ ನಾವು ಗಮನಿಸಬೇಕಾದ ಒಂದು ಸಂಗತಿ ಎಂದರೆ ಆ ಯುವಕ ಕುಡಿತ ಬಿಟ್ಟಿದ್ದು ಆತನ ಗಟ್ಟಿ ಮನಸ್ಸಿನಿಂದ. ಮತ್ತೆ ದಾಸನಾಗಿದ್ದು ಚಂಚಲ ಮನಸ್ಸಿನಿಂದ. ವ್ಯಕ್ತಿಗೆ ಎರಡೂ ಅವಕಾಶಗಳಿರುತ್ತವೆ. ಒಂದು ದೃಢ ಮನಸ್ಸು, ಇನ್ನೊಂದು ದುರ್ಬಲ ಮನಸ್ಸು. ಇವೆರಡರಲ್ಲಿ ಯಾವುದು ಹಿತಕರ ಎಂಬ ಅರಿವು ನಮಗಿದ್ದಲ್ಲಿ ನೆಮ್ಮದಿಗೆ ಭಂಗ ಬರುವುದಿಲ್ಲ. ವ್ಯಕ್ತಿಯೊಬ್ಬನ ನೆಮ್ಮದಿಗೆ ಧಕ್ಕೆ ಬಂದಲ್ಲಿ ಅದರ ಪರಿಣಾಮ ಇಡೀ ಕುಟುಂಬದ ಮೇಲೆ ಆಗೋದು ಖಚಿತ. ಜತೆ ಜತೆಗೆ ಆತನ ವೃತ್ತಿ ಜೀವನದ ಮೇಲೂ ದುಷ್ಪರಿಣಾಮ ಬೀರುತ್ತದೆ. ಆ ವ್ಯಸನದಿಂದ ವ್ಯಕ್ತಿಯ ಅವಸಾನ ಶುರು ಎಂತಲೇ ಹೇಳಬಹುದು.

ನಮ್ಮ ದೇಶ ನಮ್ಮ ಟೀಂ ಗೆಲ್ಲಬೇಕು. ವಿಶ್ವಕಪ್ ಕಿರೀಟವನ್ನು ತನ್ನ ಮುಡಿಗೇರಿಸಿಕೊಳ್ಳಬೇಕು ಎಂಬ ಅಭಿಮಾನ ಎಲ್ಲವೂ ಓಕೆ. ಆದರೆ ಅದಾಗದಿದ್ದಲ್ಲಿ ನಾವೇಕೆ ನಮ್ಮ ಆರೋಗ್ಯ, ದುಡಿಮೆ ಹಾಳು ಮಾಡಿಕೊಳ್ಳಬೇಕು? ಇದೊಂದು ನೆಪವಷ್ಟೇ. ನಮ್ಮ ಮನಸ್ಸು ನಮ್ಮ ಅಂಕಿತದಲ್ಲಿಲ್ಲ ಎಂಬುದನ್ನು ಈ ಸ್ಥಿತಿ ಬಿಂಬಿಸುತ್ತದೆ. ಇಲ್ಲಿ ಇನ್ನೊಂದು ಸಂಗತಿ ಸ್ಪಷ್ಟ ಏನೆಂದರೆ ಆತ ಅಂದು ಟೀಂ ಇಂಡಿಯಾ ಗೆದ್ದಿದ್ದರೂ ಕುಡಿಯುತ್ತಿದ್ದ. ಅದಕ್ಕೆ ಗೆಲುವಿನ ಸಂಭ್ರಮ ಎಂದು ಕಾರಣ ಕೊಡುತ್ತಿದ್ದ. ಮತ್ತೆ ಕುಡಿತ ಆರಂಭಿಸಬೇಕು. ಅದಕ್ಕೊಂದು ಸೂಕ್ತ ಸಂದರ್ಭದ (ಮುಹೂರ್ತ) ಹುಡುಕುವ ಮನಸ್ಸು ಇದ್ದಾಗ ಆ ದೃಢ ನಿರ್ಧಾರವನ್ನು ಬದಲಾಯಿಸೋದು ಕಷ್ಟ ಮತ್ತು ಆ ನಿಟ್ಟಿನಲ್ಲಿ ಇಚ್ಛಾಶಕ್ತಿ ಬರುವುದೂ ಇಲ್ಲ. ಈಗ ನನ್ನ ಬಳಿ ಬಂದ ಯುವಕ 3 ವರ್ಷಗಳ ಮುಂಚೆ ಕುಡಿತ ಬಿಡಲು ಏನು ಮಾಡಬೇಕು ಎಂಬ ಪರಿಹಾರ ಅರಸಿ ಬಂದಿದ್ದ. ಈಗ ಮತ್ತೆ ಅದರ ದಾಸನಾಗಿ ಮತ್ತದೇ ಪರಿಹಾರ ಕೋರಿ ಬಂದ. ಇದು ಅವನ ಮನೋದೌರ್ಬಲ್ಯದ ಪ್ರತೀಕ.

ಈ ಪ್ರಕರಣ ಮುಂದೆ ಇಟ್ಟುಕೊಂಡು ನಾನು ಹೇಳಬೇಕಿರುವುದು ಇಷ್ಟೇ ಅದೇನೆಂದರೆ ಮನಸ್ಸು ಮರ್ಕಟ. ಅದು ಸಮಸ್ತ ಒಳಿತುಕೆಡಕಿಗೆ ಕಾರಣೀಭೂತವಾಗುತ್ತದೆ. ನಾವು ಕೈಗೊಳ್ಳುವ ಪ್ರತಿಯೊಂದು ನಿರ್ಧಾರ, ಮಾಡುವ ಆಲೋಚನೆಗಳ ಹಿಂದೆ ಸಕಾರಣವಿರಬೇಕು. ಅದರ ಪರಿಣಾಮದ ಪ್ರಮಾಣದ ಅರಿವಿರಬೇಕು. ಜತೆಗೆ ಸ್ವಸ್ಥ ಮನಸ್ಸು ಇದ್ದರೆ ಸಮಾಜವೂ ಸ್ವಸ್ಥವಾಗಿರುತ್ತದೆ. ಯಾವುದೇ ವ್ಯಸನಿ ಅದರಿಂದ ಹೊರಬಂದ ಮೇಲೂ ದೌರ್ಬಲ್ಯಯುಕ್ತ ಮನಸ್ಥಿತಿಗೆ ಬಂದರೆ ಹಾಳಾಗೋದು ಆತನ ಜೀವನ ಮತ್ತು ಭವಿಷ್ಯವೇ ಹೊರತು ವ್ಯಸನದ್ದಲ್ಲ. ಇದು ಅರ್ಥವಾದರೆ ವ್ಯಸನವೇ ಅವಸಾನ ಆಗೋದು ಆ ಸೂರ್ಯ ಚಂದಿರರಷ್ಟೇ ಸತ್ಯ.

(ಪ್ರತಿಕ್ರಿಯಿಸಿ: vvsudina@gmail.com)

# ರಕ್ತದಾನ ಜೀವ ಜೀವಗಳ ಸಂಜೀವಿನಿ



• ಡಾ. ಮೈತ್ರಿ ಭಟ್, ವಿಟ್ಲ

'ರಕ್ತದಾನ ಮಹಾದಾನ', 'ರಕ್ತದಾನಕ್ಕಿಂತ ಮಿಗಿಲಾದ ದಾನ ಮತ್ತೊಂದಿಲ್ಲ' ಎಂಬ ಮಾತುಗಳು ರಕ್ತದ ಮಹತ್ವವನ್ನು ಸಾರುತ್ತವೆ. ವೈದ್ಯರು ಹೇಳುವ ಪ್ರಕಾರ, ಪ್ರತೀ ಆರೋಗ್ಯವಂತ ಮನುಷ್ಯನ ದೇಹದಲ್ಲಿ ಸುಮಾರು 5 ಲೀಟರ್ ರಕ್ತ ಇರಬೇಕು. ಆದರೆ ಬಹಳಷ್ಟು ಜನರು ರಕ್ತದ ಕೊರತೆಯನ್ನು ಎದುರಿಸುತ್ತಿದ್ದಾರೆ. ಮಾತ್ರವಲ್ಲ, ಗರ್ಭಧಾರಣೆ, ಹೆರಿಗೆ ಅಥವಾ ರಕ್ತಸ್ರಾವದಿಂದ ಬಳಲುತ್ತಿರುವವರಿಗೆ ರಕ್ತವು ಅಗತ್ಯವಾಗಿದೆ.

ಯಾವುದೇ ಒಬ್ಬ ವ್ಯಕ್ತಿ ಇನ್ನೊಬ್ಬರ ಜೀವ ಉಳಿಸುವ ಸಲುವಾಗಿ ತನ್ನ ರಕ್ತವನ್ನು ಸ್ವಯಂಪ್ರೇರಣೆಯಿಂದ ಯಾವುದೇ ತರದ ಪ್ರತಿಫಲಾಪೇಕ್ಷೆಯಿಲ್ಲದೆ ದಾನಮಾಡುವುದೇ ರಕ್ತದಾನ. ವಿಶ್ವದ ಅರ್ಧದಷ್ಟು ರಾಷ್ಟ್ರಗಳಲ್ಲಿ ರಕ್ತದ ಕೊರತೆಯಿದ್ದು, ಈ ಕೊರತೆಯನ್ನು ನೀಗಿಸುವುದೇ ಈ ರಕ್ತದಾನ ದಿನಾಚರಣೆಯ ಮುಖ್ಯ ಉದ್ದೇಶವೂ ಆಗಿದೆ.

ವೈಜ್ಞಾನಿಕವಾಗಿ ಜಗತ್ತು ಅದೆಷ್ಟೋ ಮುಂದುವರಿದು ಹೆಚ್ಚಿನ ಎಲ್ಲವನ್ನೂ ಕೃತಕವಾಗಿ ಸೃಷ್ಟಿ ಮಾಡಲು ತೊಡಗಿದರೂ ರಕ್ತದ ಕೃತಕ ಸೃಷ್ಟಿ ಸಾಧ್ಯವಾಗಿಲ್ಲ. ರಕ್ತಕ್ಕೆ ಪರ್ಯಾಯವಾದ ವಸ್ತುವಿಲ್ಲ. ರಕ್ತವನ್ನು ನಾವು ಕೇವಲ ಮನುಷ್ಯರಿಂದ ಮಾತ್ರ ಪಡೆಯುವುದಕ್ಕೆ ಸಾಧ್ಯ. ದಾನವಾಗಿ ಪಡೆದ ರಕ್ತದ ಬಾಳಿಕೆಯ ಅವಧಿ ಸುಮಾರು 35 ದಿನಗಳು ಮಾತ್ರ. ನಂತರ ಆ ರಕ್ತ ಉಳಿದಿದ್ದರೂ ಅದು ಉಪಯೋಗಕ್ಕೆ ಬರುವುದಿಲ್ಲ.

## ಸ್ವಯಂಪ್ರೇರಣೆಯ ಅಗತ್ಯತೆ

ರಕ್ತದಾನ ಮಾಡಿದ ಕೆಲವೇ ಕ್ಷಣಗಳಲ್ಲಿ ದಾನಿಯ ದೇಹದಲ್ಲಿ ರಕ್ತ ಉತ್ಪಾದನೆ ಆರಂಭವಾಗಿ ಸುಮಾರು 24 ಗಂಟೆಗಳಲ್ಲಿ ದಾನ ಮಾಡಿದ ಪ್ರಮಾಣದಷ್ಟು ರಕ್ತ ಮತ್ತೆ ಉತ್ಪತ್ತಿಯಾಗುತ್ತದೆ. ಸುಮಾರು 15 ದಿನಗಳಲ್ಲಿ ರಕ್ತದ ಎಲ್ಲಾ ಅಂಶಗಳು ತುಂಬಿಕೊಳ್ಳುತ್ತವೆ. ಆದರೆ ಈ ಕುರಿತು ಬಹಳಷ್ಟು ತಪ್ಪು ಕಲ್ಪನೆ, ಗೊಂದಲಗಳನ್ನು ಪರಿಹರಿಸುವ ಪ್ರಯತ್ನವನ್ನು ಸರ್ಕಾರ, ಅನೇಕ ಸಂಘ ಸಂಸ್ಥೆಗಳು ನಿರಂತರವಾಗಿ ಮಾಡುತ್ತಿವೆ. ಆದರೂ ಇನ್ನೂ ಉಳಿದಿರುವ ಭಯದ ಹೋಗಲಾಡಿಸುವಿಕೆ ಮಾತ್ರವಲ್ಲ, ಸ್ವಯಂ ಪ್ರೇರಿತರಾಗಿ ಜನರನ್ನು ರಕ್ತದಾನಕ್ಕೆ ಉತ್ತೇಜಿಸಬೇಕಾದ ನಿರಂತರ ಅಗತ್ಯ ಈಗಲೂ ಇದೆ.

ರಕ್ತವು ಕೆಂಪು ರಕ್ತ ಕಣ, ಬಿಳಿ ರಕ್ತ ಕಣ, ಪ್ಲಾಸ್ಮಾಗಳನ್ನು ಒಳಗೊಂಡಿರುತ್ತದೆ. ಇವು ಅಗತ್ಯ ಇರುವ ಬೇರೆ ಬೇರೆ ರೋಗಿಗಳಿಗೆ ಒಂದರಿಂದ ಒಂದನ್ನು ಬೇರ್ಪಡಿಸಿ ನೀಡಲು ಉಪಯೋಗವಾಗುತ್ತವೆ. ಕೆಂಪು ರಕ್ತ ಕಣಗಳು ಕಡಿಮೆಯಾದಲ್ಲಿ ದೇಹದ ಹಿಮೋಗ್ಲೋಬಿನ್ ಮಟ್ಟ ಕಡಿಮೆಯಾದರೆ, ಬಿಳಿ ರಕ್ತ ಕಣವು ದೇಹವು ರೋಗದ ವಿರುದ್ಧ ಹೋರಾಡಲು ಬೇಕಾಗುವ ಅವಶ್ಯ ರಕ್ಷಣೆಯನ್ನು ಒದಗಿಸುತ್ತದೆ.

ನಮಗೆಲ್ಲರಿಗೂ ತಿಳಿದಿರುವಂತೆ ಸಾಮಾನ್ಯವಾಗಿ ರಕ್ತದಲ್ಲಿ ಎ, ಬಿ, ಒ ಮತ್ತು ಎಬಿ ಎಂಬ ರಕ್ತದ ಗುಂಪುಗಳಿವೆ. ಕೆಲವು ರೋಗಗಳು ಬಂದಾಗ ಅಥವಾ ಅಪಘಾತಕ್ಕೆ ಒಳಗಾಗಿ ರಕ್ತಸ್ರಾವ ಆದಾಗ ವ್ಯಕ್ತಿ ರಕ್ತ ಬಯಸಿದಾಗ ಆಯಾ ಗುಂಪಿನ ಅಥವಾ ಅದಕ್ಕೆ ಹೊಂದಿಕೆಯಾಗುವ ರಕ್ತದ ಗುಂಪೇ ಬೇಕಾಗುತ್ತದೆ. ಆದರೆ ಕೆಲವೊಮ್ಮೆ ರಕ್ತ ಸಿಗದೇ ಪರದಾಡುವ ಸ್ಥಿತಿಯೂ ಎದುರಾಗುತ್ತದೆ. 18 ವರ್ಷಕ್ಕಿಂತ ಮೇಲ್ಪಟ್ಟ 45 ಕೆ.ಜಿ. ಗಿಂತ ಹೆಚ್ಚು ತೂಕವಿರುವ ಎಲ್ಲಾ ಆರೋಗ್ಯವಂತ ವ್ಯಕ್ತಿಗಳು ಕೂಡಾ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು.



ರಕ್ತ ಎಂಬ ಈ ಕೆಂಪು ಹನಿ ಬದುಕಿನ ಅಮೂಲ್ಯ ಜೀವ ನಿಧಿ. ಭಾರತದಲ್ಲಿ ಸುಮಾರು 12,000 ದಷ್ಟು ಜನ ಪ್ರತೀ ವರ್ಷ ರಕ್ತದ ಕೊರತೆಯಿಂದ ಸಾಯುತ್ತಾರೆ. ನಾವು ಸ್ವಯಂ ಜಾಗೃತರಾಗಿ ರಕ್ತವನ್ನು ದಾನ ಮಾಡಲು ಮುಂದಾದಾಗ ಮಾತ್ರ ಜೀವ–ಜೀವನಗಳನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, ಮಾನವನ ದೇಹದ ಜೀವಸೆಲೆಯಾದ ರಕ್ತವನ್ನು ದಾನವಾಗಿ ನೀಡುವ ಮೂಲಕ ಇನ್ನೊಂದು ಜೀವದ ಉಳಿವಿಗೆ ಕಾರಣರಾಗೋಣ, ಮಾನವತೆಯ ಉಳಿವಿಗೆ ಸಾಕಾರವಾಗೋಣ.

## ದಾನಿಗಳಿಗೂ ಲಾಭವಿದೆ



ಎಷ್ಟೇ ಶಿಬಿರಗಳ ಮೂಲಕ ಜಾಗೃತಿ ಮೂಡಿಸಿ ರಕ್ತದಾನ ನಡೆದರೂ ಇನ್ನೂ ರಕ್ತದ ಕೊರತೆ ದೇಶದೆಲ್ಲೆಡೆ ಕಾಡುತ್ತಿದೆ. ರಕ್ತದಾನ ಮಾಡುವುದ ರಿಂದ ರಕ್ತದಾನ ಮಾಡುವುದರಿಂದ ನಾವು ಇನ್ನೊಬ್ಬರ ಜೀವ ಉಳಿಸ ಬಹುದು. ಆದರ ಜತೆ ನಮ್ಮ ದೇಹ 'ದಲ್ಲಿ ಕೊಲೆಸ್ಟ್ರಾಲ್ ಅಂಶ ಕಡಿಮೆ ಯಾಗುವುದರೊಂದಿಗೆ, ಭವಿಷ್ಯ ದಲ್ಲಿ ನಮಗೆ ಬರಬಹುದಾದ ಹೃದ್ರೋಗ, ರಕ್ತದೊತ್ತಡದಂತಹ ಕೆಲವು ಕಾಯಿಲೆಗಳಿಂದ ರಕ್ಷಿಸಿ ಕೊಳ್ಳುವುದಕ್ಕೂ ಸಾಧ್ಯವಾಗುತ್ತದೆ.


Business Finance


## NATIONAL PENSION SYSTEM

# Select and switch fund managers based on long-term performance

### If underperformance persists for two years, change fund manager

**SANJAY KUMAR SINGH**

### CONSIDERABLE DIVERGENCE IN RETURNS OVER A DECADE




*E is for equity. Data as on December 1, 2023. Only funds having 10-year data included

Source: npstrust.org.in

Subscribers to the National Pension System (NPS) could earlier have only one pension fund manager (PFM) across all four asset classes.

By a circular dated November 22, the Pension Fund Regulatory and Development Authority (PFRDA) has permitted existing subscribers to NPS All Citizens Model and NPS Corporate Model (Tier-I funds) and all subscribers to Tier-II funds to have separate PFMs in three asset classes — equity (E), corporate bonds (C), and government bonds (G). New subscribers will be able to avail of this facility three months after registering with NPS.

**More choice**

This step has been taken as part of PFRDA's goal to offer more choice and flexibility to investors.

"The astute subscriber can now select separate PFMs for different asset classes based on performance track record, investment style, and the outlook of each PFM," says Kurian Jose, chief executive officer (CEO), Tata Pension Management.

At a given point, different PFMs can outperform in different asset classes. "Earlier, investors chose their PFM based on the brand they were comfortable with, or based on the performance of a single asset class. Now, they can benefit from outperformance by different PFMs in different asset classes," says Vishal Dhawan, chief financial planner, Plan Ahead Wealth Advisors.

According to Rajesh Khandagale, senior vice-president-NPS, KFin Technologies, "This move will empower investors by allowing them to diversify across fund managers."

This step is likely to promote competition. Deepesh Raghaw, a Securities and Exchange Board of India (Sebi) registered investment advisor (RIA) says: "PFMs will no longer think of the funds they get as captive money. If they don't perform, the money could flow out."



YOUR MONEY

**Burden of choice**

While more choice is liberating, it also puts the onus of selecting the right options on the investors. Not all may be equipped to handle it. Besides, past performance is no guarantee of future returns. "These are actively-managed funds. You may pick a fund by one PFM based on past performance but another may outperform over the next, say, five years," says Raghaw.

**Facility for active-choice investors only**

This facility is available only to subscribers who opt for the active-choice model. Those opting for auto choice will have to make do with one PFM only.

According to experts, investors should not go for active-choice mode just to have access to three PFMs. They should choose the mode that is suited to them. Auto choice is suitable for people who cannot manage their own money — those who cannot decide the right asset allocation and rebalance periodically. "If you are this type of investor, stick to the auto-choice option," says Dhawan.

**Focus on long-term performance**

Dhawan suggests using long-term performance as the primary criterion for selecting PFMs. Use this data to weed out the laggards, then either go with the best performer or select a PFM from the shortlist that belongs to a trusted brand in the fund management space.

Review performance every six months. "Again, monitor long-term data. If underperformance continues for two years, switch to another PFM," says Dhawan.

**Focus on asset allocation**

If you go for the active-choice option, then focus on your overall portfolio's asset allocation. "Ensure that your allocation to various asset classes within NPS is in sync with the asset allocation of your overall portfolio (including mutual funds and other instruments)," says Dhawan. Remember, asset allocation has a greater bearing on portfolio performance than the choice of fund managers. Finally, as Jose suggests, do not become trigger-happy about changing PFMs just because choosing separate PFMs across asset classes has been permitted.

# India's outward remittances under LRS surge to a record $18.34 b in H1 FY24

**Jayant Pankaj**
Chennai

In the first half of FY24, money sent abroad by Indians under the Liberalised Remittance Scheme (LRS) hit a record high of $18.34 billion. This is a 37 per cent jump compared with the remittance in the corresponding period in the last fiscal. Under the Reserve Bank of India's LRS, all resident Indians can freely remit up to $2,50,000 per financial year (April-March) for any permissible current or capital account transaction or a combination of both.


## DATA FOCUS.

Even though LRS remittance dipped during the pandemic, it started picking up from the second half of FY22, surpassing pre-pandemic levels. It has been growing steadily since then. However, there is a probability of these remittances falling in H2FY24 after the Centre issued a new directive to raise the Tax Collection at Source (TCS) from 5 per cent to 20 per cent on certain foreign remittances under the LRS, effective October 1.

### Travel-led LRS boom


**Money sent under LRS grows**

*Money sent abroad under LRS ($, billion)*




**A major part of it spent on travel**

*Money sent under LRS in H1FY24 ($, billion)*




Source: RBI Monthly bulletins

### HOLIDAYING ABROAD

In H1FY24, a major part of the LRS remittance, close to 51 per cent, was spent on travel. The travel component alone amounts to $9.3 billion. It is followed by maintenance of close relatives ($3.05 billion), gifts ($2.26 billion) and studies abroad ($1.8 billion).

Due to pandemic-related travel restrictions, remittances for travel abroad remained stagnant for almost two years. However, data suggests a shift in December 2021 when $884 million was remitted for travel. Since then, remittances on travel have been steadily increasing, reaching $2.03 billion in August and $9.3 billion in September 2023.

"Since travel restrictions imposed during the pandemic have been lifted, many Indian families are looking eagerly to travel abroad now," says Riaz Thingna, Partner, Grant Thornton Bharat. He adds that work-from-home policies imposed during the pandemic have helped a lot of Indians who work in the corporate sector to save more money. "They are looking at spending that on foreign travel now," he says.

RBI data shows that remittances for the maintenance of close relatives rank as the second-highest priority. Remittances in this category remained relatively consistent, ranging from $250 million to $300 million every month. However, there was a sudden peak in March this year, reaching $630 million, followed by the highest remittance of $890 million in June. This is followed by gifts.

"Many HNIs and their families are looking to relocate outside India, spurred by better access to education and healthcare facilities, work-life balance, quality of life, stable political environment and favourable tax policies," says Thingna.

Radhika Piplani, Chief Economist, DAM Capital Advisors, also makes a similar point. She adds, "Additionally, many individuals wish to send their children abroad for better opportunities, which could lead to taking care of their family members overseas, and this leads to higher remittance for the maintenance of close relatives."

According to RBI data, remittances for studies abroad rank fourth. Surprisingly, during the pandemic period, remittances in this category increased every month until August 2021 ($780 million) and September 2021 ($718 million). However, since then, remittances have shown a declining trend every month, with some notable fluctuations in the middle of 2022-23. Explaining this rise, Thigna says, "During the pandemic, many students opted to delay the courses and started only when travel restrictions were lifted, which was in 2021."


# New high: Sensex tops 69k on expectation of stable govt

**MAKING A BEELINE.** FPIs were net buyers for ₹17,133 crore in the last 8 trading sessions

**Our Bureau**
Mumbai

The equity markets' record-breaking momentum persisted as the bellwether Sensex surpassed 69,000 for the first time, driven by expectations of a stable government following next year's General Election.

The BSE Sensex opened at a record high of 69,169 and gained 303 points, or 0.44 per cent, compared to the previous close of 68,865. It closed at 69,296.14, up 0.63 per cent or 431.02 points. The National Stock Exchange's Nifty climbed 122 points, or 0.59 per cent, to open at a new high of 20,809 and surged further to close at 20,855 points on heavy buying interest triggered by FOMO (fear of missing out).



**KEY DRIVERS.** Markets reached new highs driven by substantial gains in power, oil, gas and banking stocks

Nifty has continued its upward momentum, marking gains for the sixth consecutive day. Cash volumes on the NSE crossed ₹1.2-lakh crore amid increased activity from institutions including FPIs. Broad market indices rose less than the Nifty even as the advance decline ratio fell to 0.91:1.

Foreign Portfolio Investors (FPIs) remained net buyers to the tune of ₹17,133 crore in the last eight trading sessions. Going forward, investors will take cues from US Service PMI and Jolt Jobs data that will be released late today.

Prashanth Tapse, Senior VP (Research), Mehta Equities, said markets reached new highs driven by substantial gains in power, oil, gas, and banking stocks. Investors remain optimistic about India's growth, reinforced by the ruling party's recent election victory in State elections, fuelling bullish sentiment.

# Kotak Mahindra Investments to double real estate loan book in next three years

**Janaki Krishnan**
Mumbai

Kotak Mahindra Investments (KMIL) is aiming to double its real estate loan book in the next three years, after having grown about 28 per cent over the last three years.

The growth is expected not only from the residential loan portfolio but also from the commercial segment in which it plans to be more aggressive, Chief Executive Officer Amit Bagri told *businessline*.

KMIL provides developer loans to the real estate sector as well as structured financing to the corporate sector. The real estate loan portfolio is over 48 per cent of its combined loan book which was around ₹10,800 at the end of September, up from ₹9,836 crore at the end of March. The total loan



Amit Bagri, CEO, KMIL

book has increased 84 per cent over the last three years.

**FOCUS AREAS**

Bagri said that while the residential segment would account for a significant portion of the portfolio, it was looking to stabilise at a split where 65 per cent would be residential and the remaining commercial. Currently, the residential segment has a higher portfolio contribution of 80 per cent. Within the commercial sector, the company plans to focus on the mid-tier developers of offices, warehouses, while it is evaluating the data centre segment and has lent to a couple of malls.

The robust pre-sales of the top ranked developers have been garnering them good collections, leading to a lowered dependency on loans. Collection figures of the top listed developers have doubled in two years to over ₹60,000 crore in FY23, and it is set to cross ₹80,000 crore in the current fiscal year, with most of the developers expecting to overshoot their stated targets. This has resulted in credit lines from lenders not being fully utilised. With debt levels of many companies drastically reduced, they have more free cash flows to deploy into their business.

While this poses a challenge to the financier, Bagri said that there were good opportunities with the tier 2 developers, but with good track record, governance standards and good projects in good locations. Developers who had slowed down in previous years when demand was low are now coming back. "I think the opportunity is large," he added.

The company is focused mostly on projects in the large eight cities across the country.

Bagri said that lending to commercial sector would be selective as many of the larger players would have loan tie-ups with banks especially with lease rent discounting arrangements. But "we will increase commercial, we want to increase commercial, we want to increase warehousing, we want to increase retail. And we have to pick and choose where we can compete," he said.

# Ambuja Cements raises open offer price for Sanghi Ind to ₹121.90/share

**DEAL TERMS.** Extends inter-corporate loan of ₹1,810 cr for repayment of existing loans

**Our Bureau**
Mumbai

Gautam Adani-led Ambuja Cements has increased the open offer price for Sanghi Industries to ₹121.90 a share from ₹114.22 as the company completed the deal to acquire shares from the erstwhile promoters.

Ambuja Cements had acquired 14 crore equity shares of Sanghi Industries (SIL), representing 54.51 per cent equity at ₹121.90 per equity share from the promoters.

The remaining 57 lakh equity shares representing 2.23 per cent of SIL was to be acquired separately, said Ambuja Cements in a statement.

The company has also extended inter-corporate loan of ₹1,810 crore to SIL for repayment of existing loans.

On August 3, Ambuja Cement announced plans to acquire a 56.74 per cent stake in SIL from its promoter group — Ravi Sanghi and family. The deal was executed at an enterprise value of ₹5,185 crore. The acquisition was funded through internal accruals.

**KEY DETAILS**

- Ambuja Cements had acquired 14 crore equity shares of Sanghi Industries, representing 54.51 per cent equity from promoters
- The offer price was increased to ₹121.90 per equity share from ₹114.22 apiece
- About 57 lakh equity shares, representing 2.23 per cent of Sanghi Industries, to be acquired separately

**SIL FACILITY**

SIL has an integrated manufacturing unit and clinker production facility on 2,700 hectares at Sanghipuram. This facility comprises two kilns with clinker production capacity of 6.6 MTPA, a cement grinding unit of 6.1 MTPA, a dedicated 13-MW captive power plant and 13-MW Waste Heat Recovery System. The unit is connected to a captive jetty in Sanghipuram.

SIL also has billion-tonne of high quality limestone reserves. ACL targets to increase the cement capacity at the plant to 15 MTPA along the West Coast on the strength of SIL's low-cost clinker.

ACL will invest in expanding the existing captive port at Sanghipuram to accommodate larger vessels to meet the growing demand for cement across Gujarat, Maharashtra, Karnataka and Kerala. This is expected to be commissioned over next 30 months.

The company plans to increase clinker capacity by 0.5 mtpa and cement capacity by 1.5 mtpa through debottle necking. The unit also offers potential for green power generation, reaching up to 45 per cent, incorporating an additional 12 MW WHRS and 30 MW of Solar/Wind power.

This multi-fuel flexibility enables the utilisation of locally available lignite and an increase in AFR consumption to up to 20 per cent, positioning Sanghipuram as the largest single-location clinker complex.

Ajay Kapur, CEO, Cement Business, said the acquisition represents a significant step forward in the Group's strategy to solidify its leadership position in the cement industry. It strengthens the Group's commitment to delivering high-quality products and services to customers while contributing to the country's infrastructure development, he said.

### ಆರ್‌ಬಿಐ ಹಣಕಾಸು ನೀತಿ ಪರಾಮರ್ಶೆ ಸಭೆ ಇಂದಿನಿಂದ ಶುರು

# ಬಡ್ಡಿ ಮತ್ತೆ ಯಥಾಸ್ಥಿತಿ ಸಂಭವ

■ ನಾಗೇಶ ಜಿ. ವೈದ್ಯ

ವಿಕ ಮುನ್ನೋಟ

ಬಹುರಾಷ್ಟ್ರೀಯ ಸಂಸ್ಥೆಗಳು, ರಿಸರ್ವ್ ಬ್ಯಾಂಕ್ ಹಾಗೂ ಅರ್ಥಶಾಸ್ತ್ರಜ್ಞರ ನಿರೀಕ್ಷೆಗೂ ಮೀರಿ ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ದೇಶವು ಶೇ.7.6ರ ಜಿಡಿಪಿ ದಾಖಲಿಸಿದೆ. ಅಕ್ಟೋಬರ್‌ನಲ್ಲಿ ಶೇ.4.87ಕ್ಕೆ ಇಳಿದಿರುವ ಚಿಲ್ಲರೆ ಹಣದುಬ್ಬರ, ಕಳೆದ ಏಳು ತಿಂಗಳುಗಳಿಂದ ಋಣಾತ್ಮಕ ಬೆಳವಣಿಗೆಯನ್ನು ಹೊಂದಿರುವ ಸಗಟು ಹಣದುಬ್ಬರವು



ಗಮನಾರ್ಹ. ಶೇ.12.1ರ ಬೆಳವಣಿಗೆಯನ್ನು ದಾಖಲಿಸಿರುವ ಕೈಗಾರಿಕಾ ವಲಯ, ನಿರಂತರ ಏರಿಕೆಯೊಂದಿಗೆ 597.39 ಶತಕೋಟಿ ಡಾಲರ್‌ಮಟ್ಟ ತಲುಪಿರುವ ವಿದೇಶಿ ವಿನಿಮಯ ಸಂಗ್ರಹ, ಸತತ ಆರನೇ ತಿಂಗಳೂ 1.60 ಲಕ್ಷ ಕೋಟಿ ರೂ.ಗಳನ್ನು ಮೀರಿದ ಜಿಎಸ್‌ಟಿ ಸಂಗ್ರಹದ ಖುಷಿ ಸುದ್ದಿಗಳೂ ಇವೆ. ಐತಿಹಾಸಿಕ ಗರಿಷ್ಠ ಮಟ್ಟವನ್ನು ತಲುಪಿರುವ ಷೇರು ಮಾರುಕಟ್ಟೆ ಸೂಚ್ಯಂಕ.... ಶುಭ ಸುದ್ದಿಗಳು ಒಂದೇ ಎರಡೇ?

– ಇಷ್ಟೆಲ್ಲ ಸಕಾರಾತ್ಮಕ ಬೆಳವಣಿಗೆಗಳ ನಡುವೆ ರಿಸರ್ವ್ ಬ್ಯಾಂಕ್‌ನ ವಿತ್ತೀಯ ನೀತಿ ಸಮಿತಿಯ ಸಭೆ ಡಿ.6ರಂದು ಆರಂಭವಾಗಲಿದೆ. ಡಿ.8ರಂದು ಬಡ್ಡಿದರದ ಮೇಲಿನ ತನ್ನ ನಿರ್ಧಾರವನ್ನು ಘೋಷಿಸಲಿದೆ. ಬಡ್ಡಿ ದರ ಈ ಸಲವಾದರೂ ಇಳಿಕೆಯಾಗುತ್ತಾ, ನಮ್ಮ ಸಾಲದ ಇಎಂಐ ಹೊರೆ ಕಡಿಮೆಯಾಗುತ್ತಾ ಎನ್ನುವ ನಿರೀಕ್ಷೆಗಳು ಜನಸಾಮಾನ್ಯರಲ್ಲಿವೆ.

**ಆದರೆ, ಸವಾಲು ಮುಗಿದಿಲ್ಲ!**


ದೇಶದಲ್ಲಿನ ಧನಾತ್ಮಕ ಅಂಶಗಳ ನಡುವೆಯೂ, ಬಡ್ಡಿದರದ ಇಳಿಕೆಯ ವಿಚಾರದಲ್ಲಿ ರಿಸರ್ವ್ ಬ್ಯಾಂಕ್ ಎದುರು ಕೆಲವು ಸವಾಲುಗಳು ಉಳಿದುಕೊಂಡಿವೆ. ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರವು ನಾಲ್ಕು ತಿಂಗಳ ಕನಿಷ್ಠ ಮಟ್ಟ ಶೇ.4.87ಕ್ಕೆ ಕುಸಿದಿದ್ದರೂ, ಬೇಳೆಕಾಳುಗಳ ಬೆಲೆಗಳ ಏರಿಕೆಯಿಂದಾಗಿ ಆಹಾರ ಹಣದುಬ್ಬರ ಶೇ.6.61ರ ಮಟ್ಟದಲ್ಲೇ ಮುಂದುವರಿದಿದೆ. ಅಸಮ ಮಳೆಯಿಂದಾಗಿ, ಕೃಷಿ ಉತ್ಪಾದನೆ ಕುಂಠಿತಗೊಂಡಿದ್ದು, ಆಹಾರ ಧಾನ್ಯಗಳ ಬೆಲೆಗಳ ಮೇಲೆ ಪ್ರಭಾವ ಬೀರಿದೆ. ಅಕ್ಕಿ, ಗೋಧಿ, ಬೇಳೆಕಾಳುಗಳ ಹಣದುಬ್ಬರ ನಿಯಂತ್ರಣ ಮೀರಿದೆ. ದ್ವಿದಳ ಧಾನ್ಯಗಳ ಹಣದುಬ್ಬರವು ಸೆಪ್ಟೆಂಬರ್‌ನಿಂದ ಒಂದೇ ತಿಂಗಳ ಅವಧಿಯಲ್ಲಿ 241 ಮೂಲಾಂಕಗಳ ಏರಿಕೆಯೊಂದಿಗೆ ಶೇ.18.79ರ ಮಟ್ಟ ತಲುಪಿದೆ. ಹಣ್ಣುಹಂಪಲುಗಳ ಹಣದುಬ್ಬರವೂ 151 ಮೂಲಾಂಕಗಳ ವೃದ್ಧಿಯನ್ನು ಕಂಡಿದೆ. ಇವು ಜನಸಾಮಾನ್ಯರ ಜೇಬಿಗೆ ಹೊರೆಯಾಗುತ್ತಿದೆ.

**ಭಾರತದ ಮೇಲೆ ಜಾಗತಿಕ ಪ್ರಭಾವ**

ಜುಲೈ ತಿಂಗಳ ಗರಿಷ್ಠ ಶೇ.7.44ರಿಂದ ಸತತವಾಗಿ ಇಳಿಕೆ ಕಂಡಿರುವ ಹಣದುಬ್ಬರದ ಹೊರತಾಗಿಯೂ, ರಿಸರ್ವ್ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದ ಹಣದುಬ್ಬರದ ಮುನ್ಸೂಚನೆಯನ್ನು ಶೇ.5.4 ರಲ್ಲೇ ಉಳಿಸಿಕೊಂಡಿದೆ. ಜಾಗತಿಕ ಮಟ್ಟದಲ್ಲಿ ಕೂಡ, ಬಡ್ಡಿದರ ಇಳಿಕೆಯ ಪ್ರಕ್ರಿಯೆ ಇನ್ನೂ ಆರಂಭವಾಗಿಲ್ಲ. ಕಳೆದ ವಾರವಷ್ಟೇ ಬಡ್ಡಿದರ ಕಡಿತದ ಊಹಾಪೋಹಗಳನ್ನು ತಳ್ಳಿಹಾಕಿರುವ ಅಮೆರಿಕದ ಫೆಡರಲ್ ರಿಸರ್ವ್ ಅಧ್ಯಕ್ಷರು, ಈ ಬಗ್ಗೆ ಚರ್ಚೆ ಅಕಾಲಿಕವೆಂದಿದ್ದಾರೆ. ಪ್ರಸ್ತುತ ಶೇ.3.2ರಷ್ಟಿರುವ ಹಣದುಬ್ಬರವನ್ನು ಶೇ.2ಕ್ಕೆ ಇಳಿಸಲು ಫೆಡ್ ಪಣತೊಟ್ಟಿದೆ.

ಯುರೋಪಿಯನ್ ಸೆಂಟ್ರಲ್ ಬ್ಯಾಂಕ್ ತನ್ನ ಇತ್ತೀಚಿನ ಸಭೆಯಲ್ಲಿ, ಬಡ್ಡಿದರವನ್ನು ಶೇ.0.25ರಷ್ಟು ಏರಿಸಿದೆ. ಬ್ಯಾಂಕ್ ಆಫ್ ಇಂಗ್ಲೆಂಡ್ ಕೂಡ ರೆಪೊ ದರವನ್ನು 15 ವರ್ಷಗಳ ಗರಿಷ್ಠ ಮಿತಿಯಲ್ಲಿ ಮುಂದುವರಿಸಿದೆ.

(ಲೇಖಕರು ಕೇರಳ ಗ್ರಾಮೀಣ ಬ್ಯಾಂಕ್‌ನ ನಿಕಟಪೂರ್ವ ಅಧ್ಯಕ್ಷರು)




### ಮುನ್ಸೂಚನೆ ನೀಡಿದೆಯಾ ಆರ್‌ಬಿಐ?

**ಸೆಪ್ಟೆಂಬರ್ ಅಂಕಿಅಂಶಗಳ ಪ್ರಕಾರ, ದೇಶದ ಬ್ಯಾಂಕುಗಳ ಸಾಲ ಕೇವಲ ಶೇ.15.7ರ ವಾರ್ಷಿಕ ಬೆಳವಣಿಗೆಯನ್ನು ಕಂಡಿದೆ. ಇದಕ್ಕೆ ವ್ಯತಿರಿಕ್ತವಾಗಿ, ವೈಯಕ್ತಿಕ ಸಾಲಗಳು ಶೇ.30.79ರ ಜಿಗಿತವನ್ನು ಕಂಡಿವೆ. ಇದರ ಹಿಂದಿನ ಅಪಾಯದ ಬಗ್ಗೆ ಎಚ್ಚರಿಸಿದ್ದ ರಿಸರ್ವ್ ಬ್ಯಾಂಕ್, ವ್ಯವಸ್ಥೆಯಲ್ಲಿನ ದ್ರವ್ಯತೆಯನ್ನು ನಿಯಂತ್ರಿಸಲು ವೈಯಕ್ತಿಕ ಸಾಲಗಳು, ಕ್ರೆಡಿಟ್ ಕಾರ್ಡ್ ಸ್ವೀಕೃತಿಗಳ ಮೇಲೆ ಅಪಾಯದ ತೂಕವನ್ನು 25 ಮೂಲಾಂಕಗಳಿಂದ ಹೆಚ್ಚಿಸಿದೆ. ಇದರಿಂದಾಗಿ, ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಸಂಸ್ಥೆಗಳು(ಎನ್‌ಬಿಎಫ್‌ಸಿ) ಹೆಚ್ಚಿನ ಬಂಡವಾಳವನ್ನು ಕಾಯ್ದಿರಿಸಬೇಕಾಗುತ್ತದೆ. ಹಾಗೆಯೇ ಬ್ಯಾಂಕುಗಳು, ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ನೀಡುವ ಸಾಲದ ಮೇಲೆಯೂ ರಿಸ್ಕ್ ತೂಕವನ್ನು 25 ಮೂಲಾಂಕಗಳಿಂದ ಹೆಚ್ಚಿಸಲಾಗಿದೆ. ಇದು ರೆಪೊ ದರ ಯಥಾಸ್ಥಿತಿಯಲ್ಲಿ ಮುಂದುವರಿಯುವುದಕ್ಕೆ ಮುನ್ಸೂಚನೆ ನೀಡುವಂತಿದೆ.**

### ಆರ್‌ಬಿಐ ಗುರಿ 4%

**ಕಳೆದ ವಿತ್ತೀಯ ನೀತಿ ಸಮಿತಿಯ ಸಭೆಯಲ್ಲಿ ರಿಸರ್ವ್ ಬ್ಯಾಂಕ್‌ನ ಹಣದುಬ್ಬರ ಗುರಿಯು ಶೇ.4 ಆಗಿದೆಯೇ ಹೊರತು ಶೇ.2ರಿಂದ ಶೇ.6 ಅಲ್ಲ ಎಂದು ಗವರ್ನರ್ ಹೇಳಿರುವುದು ಅವರ ದೃಢ ನಿಲುವನ್ನು ಸ್ಪಷ್ಟಪಡಿಸಿದೆ. ಈ ವಿಚಾರದಲ್ಲಿ ರಿಸರ್ವ್ ಬ್ಯಾಂಕ್ ಯಾವುದೇ ರಾಜಿ ಮಾಡಿಕೊಳ್ಳಲು ಸಿದ್ಧವಿಲ್ಲ. ಜೊತೆಗೆ ಡಾಲರ್ ಎದುರು ದುರ್ಬಲವಾಗಿರುವ ರೂಪಾಯಿಯ ಸಮಸ್ಯೆಯೂ ರಿಸರ್ವ್ ಬ್ಯಾಂಕ್ ಮುಂದಿದೆ.**

**ಬಡ್ಡಿದರ ಕಡಿತಗೊಳಿಸುವ ಮೊದಲು ಹಣದುಬ್ಬರವನ್ನು ಗುರಿಯ ಮಟ್ಟಕ್ಕೆ ತರುವತ್ತ ರಿಸರ್ವ್ ಬ್ಯಾಂಕ್ ತನ್ನ ಗಮನವನ್ನು ಕೇಂದ್ರೀಕರಿಸಿರುವುದರಿಂದ, ಸತತ ಐದನೇ ಬಾರಿಗೆ ರೆಪೊ ದರವನ್ನು ಶೇ.6.5ರಲ್ಲೇ ಮುಂದುವರಿಸುವ ಸಂಭಾವ್ಯತೆಯೇ ಅಧಿಕವಾಗಿದೆ.**

# ಅದಾನಿ ಗ್ರೂಪ್ ಷೇರುಗಳು ಒಂದೇ ದಿನ 20% ತನಕ ಜಂಪ್

**ಹೊಸದಿಲ್ಲಿ:** ಡಿ.5 ಅನ್ನುವುದು ಗೌತಮ್ ಅದಾನಿ ನೇತೃತ್ವದ ಅದಾನಿ ಗ್ರೂಪ್ ಬ್ಲಾಕ್‌ಬಸ್ಟರ್ ಡೇ ಆಯಿತು. ಇದೊಂದೇ ದಿನದಲ್ಲಿ ಅದಾನಿ ಕಂಪನಿಗಳ ಷೇರು ದರವು ಸುಮಾರು ಶೇ.20ರ ತನಕ ಏರಿಕೆ ಕಂಡು, ಹೂಡಿಕೆದಾರರು ಹರ್ಷಗೊಂಡಿದ್ದಾರೆ.


ಅದಾನಿ ಗ್ರೂಪ್ ವಿರುದ್ಧ ಹಿಂಡೆನ್ ಬರ್ಗ್ ರಿಸರ್ಚ್ ಸಂಸ್ಥೆ ಮಾಡಿದ್ದ ಆರೋಪಗಳನ್ನು 'ಅಪ್ರಸ್ತುತ' ಎಂದು ಅಮೆರಿಕದ ಸರಕಾರದ ತನಿಖಾ ಸಂಸ್ಥೆಯೊಂದು ಹೇಳಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಅಮೆರಿಕಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಅದಾನಿ ಗ್ರೂಪ್‌ಗೆ ತುಸು ನಿರಾಳ ಸಿಕ್ಕಿದೆ.

ಇದರ ಬೆನ್ನಲ್ಲೇ ಮಂಗಳವಾರ(ಡಿಸೆಂಬರ್ 5) ಅದಾನಿ ಕಂಪನಿಗಳ ಷೇರುಗಳು ಜಿಗಿದವು. ಅದಾನಿ ಸಮೂಹದ ಕಂಪನಿಗಳ ಮಾರುಕಟ್ಟೆ ಮೌಲ್ಯ 14 ಲಕ್ಷ ಕೋಟಿ ರೂ.ಗಳ ಗಡಿ ದಾಟಿದೆ. ಮಂಗಳವಾರ ಅದಾನಿ ಒಡೆತನದ ಎಲ್ಲ ಹತ್ತು ಕಂಪನಿಗಳ ಷೇರುಗಳು ಏರಿಕೆಯಾಗಿದ್ದು, ಹೂಡಿಕೆದಾರರು 1 ಲಕ್ಷ ಕೋಟಿ ರೂ. ಲಾಭ ಗಳಿಸಿದ್ದಾರೆ.

ಅದಾನಿ ಗ್ರೂಪ್‌ನ ಪ್ರಮುಖ ಕಂಪನಿಯಾದ ಅದಾನಿ ಎಂಟರ್ ಪ್ರೈಸಸ್‌ನ ಷೇರುಗಳು ಶೇ.17.38ರಷ್ಟು ಏರಿಕೆ ಕಂಡಿದ್ದು, 2,971 ರೂ.ಗೆ ತಲುಪಿದೆ.

ಮಂಗಳವಾರ ಅದಾನಿ ಪೋರ್ಟ್ಸ್ ಷೇರುಗಳು ಶೇ.14.95ರಷ್ಟು ಏರಿಕೆಯಾಗಿದ್ದರೆ, ಎನ್‌ಡಿಟಿವಿ ಷೇರುಗಳು ಶೇ.18.11 ಹಾಗೂ ಅದಾನಿ ಪವರ್ ಷೇರುಗಳು ಶೇ.15.33ರಷ್ಟು ಗಳಿಕೆ ದಾಖಲಿಸಿವೆ. ಇದೇ ವೇಳೆ ಎಸಿಸಿ ಲಿ., ಅಂಬುಜಾ ಸಿಮೆಂಟ್ಸ್ ಷೇರುಗಳು ಶೇ.6ಕ್ಕಿಂತ ಹೆಚ್ಚು ಏರಿಕೆ ಕಂಡಿವೆ.

## ಅದಾನಿ ವಿರುದ್ಧದ ಹಿಂಡೆನ್‌ಬರ್ಗ್ ಆರೋಪ 'ಅಪ್ರಸ್ತುತ' ಎಂದ ಅಮೆರಿಕದ ತನಿಖಾ ಸಂಸ್ಥೆ



## ಯಾವ ಕಂಪನಿ ಷೇರು ಎಷ್ಟು ಏರಿಕೆ?

**ಅದಾನಿ ಎಂಟರ್‌ಪ್ರೈಸಸ್ 17.38%, ಅದಾನಿ ಗ್ರೀನ್ ಎನರ್ಜಿ 20.00%, ಅದಾನಿ ಟೋಟಲ್ ಗ್ಯಾಸ್ 20.00%, ಅದಾನಿ ವಿಲ್ಮಾರ್ 380.85 ರೂ., ಅದಾನಿ ಪೋರ್ಟ್ಸ್-ಎಸ್‌ಇಝೆಡ್ 14.95%, ಅದಾನಿ ಪವರ್ 15.33%, ಅದಾನಿ ಎನರ್ಜಿ ಸೊಲ್ಯೂಷನ್ಸ್ 20.00%, ಅಂಬುಜಾ ಸಿಮೆಂಟ್ಸ್ 6.94%, ಎಸಿಸಿ 8.15%, ಎನ್‌ಡಿಟಿವಿ 18.11%**

EDITORIAL NEWS

INDIAN EXPRESS IS NOT AN INDUSTRY. IT IS A MISSION.

— Ramnath Goenka

# CONSTRUCTION SECTOR ROLLS AGAIN, BUT HOME PRICES NEED A LEASH

THE most recent growth numbers show a construction boom. But there is an underlying suspicion that the builders' lobby is dressing up the demand and pumping up prices. A recent report said that prices in Navi Mumbai had touched ₹40,000 a square foot, and two-bedroom apartments in this distant Mumbai suburb were selling for ₹4 crore apiece. Casual inquiries show these figures are nearly twice the actual prices being negotiated on ground. A more balanced report said that while home sales have been robust, the construction boom raised big, listed realtors' inventory by over 28 percent during the April-September half-year. As a result, the value of unsold stock ballooned to over ₹1 lakh crore by the end of September. High inventory will hopefully keep housing prices on a leash.

Meanwhile, GDP data released this week showed the construction sector growing at a healthy 13.3 percent during the July-September quarter compared to a year earlier—its best performance in five quarters. This contributed to the GDP growing at 7.6 percent, making India one of the fastest growing major economies. While some builders and brokers have claimed that sales sky-rocketed 36 percent in the July-September quarter, independent consultancies say the sales growth has been around 10 percent and project price appreciation in large cities has been in the 5-10 percent range. What emerges beyond the fluff is that sales and prices have regained their pre-Covid levels and consumer confidence is pushing the home market forward.

There is a huge latent demand for housing, driven by an estimated shortage of 19 million units; this is expected to double by 2030. The situation has worsened as the government's 'housing for all by 2022' has been a failure. High land and input costs, and the fly-by-night nature of some parts of the industry have made housing unaffordable for the common man. This in turn has spawned a huge informal industry resulting in burgeoning slums and overcrowded townships. The current attempt to jack up prices, therefore, could contribute to another slump like we have seen in several boom-and-bust cycles over the past two decades. It is a sector that cannot be left to the avarice of private builders. A regular supply of affordable mass housing by government bodies is needed to ensure a balanced market.

DECCAN HERALD

ESTABLISHED 1948

# Michaung exposes our unpreparedness

Cyclone Michaung has sowed destruction on the eastern coast, including Chennai and surrounding districts in Tamil Nadu and in the Andhra and Telangana regions. Record rainfall for two days and the flooding of large areas of Chennai have forced the government to call in the armed forces for rescue and relief operations. Nearly 30 NDRF teams are said to have been deployed in Tamil Nadu, Puducherry, Andhra and Telangana. Chennai saw 151 mm of rainfall in the 24 hours ending at 8.30 am on December 4, the third highest ever in a 24-hour period; and the 24 hours ending at 8.30 am on Tuesday was worse. The state machinery and other disaster relief agencies are also on the job rescuing people and taking steps to contain the impact. At least 12 persons are reported to have been killed in rain-related incidents in Chennai and surrounding districts. The Chennai airport was shut for many hours, though operations have since resumed, and many trains have been cancelled. Schools are shut. Normal life has been disrupted, and memories of the 2015 floods have come back to haunt the residents. Though the situation is expected to improve on Wednesday, it is still unpredictable. Andhra Pradesh and Telangana have gone on high alert as the cyclone made landfall and are bracing for extreme rains and flooding.

**The cyclone has hit Tamil Nadu, Andhra, Telangana and Puducherry**

Extreme weather events, including urban flooding, are no longer rare events. The country's biggest cities like Delhi, Bengaluru and Mumbai have seen devastating floods in the last few years. There are both local reasons and global factors contributing to these events. The infrastructure has not kept up with the pressures of population explosion. Lakes, tanks and floodplains of rivers have been encroached, leading to obstruction in the free flow of flood waters. Drainages are not maintained. In fact, civic administration has gone to the dogs in all cities. In cities like Chennai, the uneven tides also have to be reckoned with. More importantly, climate change exigencies demand the building of more resilient infrastructure and even changes in lifestyles. Rainfall that falls over an year is sometimes received in one or two days. The poor are the most affected because they are the most defenceless.

Extreme weather events have ravaged the world and caused serious damage to life and property all over the world in the recent past. Libya, Greece and Turkey were hit by the Mediterranean storm Daniel in September and about 11,000 persons were killed in Libya alone. Cyclonic storms are more frequent on India's western coast now. India experienced extreme weather events every day in the last nine months of this year, resulting in the death of about 3,000 persons, according to a report from the Centre for Science and Environment (CSE). The situation will get worse, according to the report. The World Meteorological Organisation (WMO) has said that 2023 is likely the warmest year in history. India is among the countries most vulnerable to extreme climate events, but it has never been serious about preventive and other measures. Cyclone Michaung provides yet another warning.

ಉದಯವಾಣಿ
ಬುಧವಾರ, ಡಿಸೆಂಬರ್ 6, 2023

## ಸಂಪಾದಕೀಯ

# ಅರ್ಜುನ ಸಾವಿನ ಕುರಿತು ಸಮಗ್ರ ತನಿಖೆ ಆಗಬೇಕು

ಮೈಸೂರು ದಸರಾದಲ್ಲಿ ಸತತ ಎಂಟು ವರ್ಷಗಳ ಕಾಲ ಅಂಬಾರಿ ಹೊತ್ತು ಕನ್ನಡಿಗರ ನೆಚ್ಚಿನ ಆನೆ ಎನಿಸಿಕೊಂಡಿದ್ದ ಅರ್ಜುನ ಸೋಮವಾರ ಸಾವಿಗೀಡಾಗಿದೆ. ಈ ಸಾವು ಸಹಜವಾದುದು ಅಲ್ಲದಿರುವುದರಿಂದಲೇ ಇಡೀ ರಾಜ್ಯದಲ್ಲಿ ಭಾರಿ ಚರ್ಚೆಗೆ ಒಳಪಟ್ಟಿದೆ. ಸಕಲೇಶಪುರದ ಯಸಳೂರಿನಲ್ಲಿ ಕಾಡಾನೆ ಹಿಡಿಯುವ ಕಾರ್ಯಾಚರಣೆಯಲ್ಲಿ ಗಾಯಗೊಂಡು ಅರ್ಜುನ ಬಲಿಯಾಗಿದೆ. ಈ ಸಾವಿನ ಕುರಿತು ಹಲವು ಅನುಮಾನಗಳು ಹುಟ್ಟಿಕೊಂಡಿದ್ದು, ವನ್ಯಜೀವಿ ಪ್ರಿಯರು ಪರಿತಾಪಪಡುತ್ತಿದ್ದಾರೆ.



ಕಾಡಾನೆಯ ಕಾರ್ಯಾಚರಣೆಗೆ ಬಳಸಲಾಗಿದ್ದ ಐದು ಸಾಕಾನೆಗಳಲ್ಲಿ ಅರ್ಜುನ ಸಹ ಒಂದು. ಹಾಗೆ ನೋಡಿದರೆ ವಯಸ್ಸು 64 ಆದರೂ ಅರ್ಜುನ ದುರ್ಬಲನಾಗೇನೂ ಇರಲಿಲ್ಲ, ಹಿಂದೆಯೂ ಹಲವು ಯಶಸ್ವಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿತ್ತು. ಆದರೆ ಈ ಕಾರ್ಯಾಚರಣೆ ಕುರಿತು ಹಲವು ಅನುಮಾನಗಳು ಹುಟ್ಟಿಕೊಂಡಿವೆ. ಮೊದಲನೆಯದಾಗಿ 60 ವರ್ಷ ಮೀರಿದ ಯಾವುದೇ ಆನೆಗಳನ್ನು ಕಾರ್ಯಾಚರಣೆಗೆ ಬಳಸಬಾರದು ಎಂದು ಸುಪ್ರೀಂಕೋರ್ಟ್ ಸ್ಪಷ್ಟ ನಿರ್ದೇಶನ ಇದ್ದರೂ ಅರಣ್ಯ ಇಲಾಖೆ ಇದನ್ನು ನಿರ್ಲಕ್ಷಿಸಿದೆ ಎಂದು ವನ್ಯಜೀವಿ ಪ್ರೇಮಿಗಳು ಹೇಳುತ್ತಾರೆ. ಹಲವು ಕಾರ್ಯಾಚರಣೆಯಲ್ಲಿ 'ನಿವೃತ್ತ' ಆನೆಗಳನ್ನು ಬಳಸುತ್ತಿರುವುದು ಈಗಲೂ ಮುಂದುವರಿಯುತ್ತಿದೆ.

ಈ ಕಾರ್ಯಾಚರಣೆಯಲ್ಲಿ ಹಲವು ಪ್ರಶ್ನೆಗಳು ಹುಟ್ಟಿಕೊಂಡಿವೆ. ಕೆಲವು ಮೂಲಗಳ ಪ್ರಕಾರ, ಕಾಡಾನೆಗೆ ಹಾರಿಸಬೇಕಾದ ಅರಿವಳಿಕೆ ಚುಚ್ಚುಮದ್ದು ತಪ್ಪಿ ಅರ್ಜುನನಿಗೆ ತಗುಲಿ, ಕಾರ್ಯಾಚರಣೆ ನಡುವಲ್ಲೇ ಅದು ಪ್ರಜ್ಞೆತಪ್ಪಿ ಬಿತ್ತು. ಹೀಗಾಗಿ ಕಾದಾಡಲಾಗದೆ ಸೋಲೊಪ್ಪಿಕೊಳ್ಳಬೇಕಾಯಿತು ಎಂದು ಹೇಳಲಾಗುತ್ತದೆ. ಮತ್ತೊಬ್ಬರ ವಾದದ ಪ್ರಕಾರ, ಕಾಡಾನೆಗೆ ಹಾರಿಸಬೇಕಾದ ಗುಂಡು ತಪ್ಪಿ ಅರ್ಜುನನಿಗೆ ಬಿತ್ತು ಎಂದು ಹೇಳಲಾಗುತ್ತದೆ. ಇದೆಲ್ಲದರ ನಡುವೆ, ಮದವೇರಿದ ಆನೆಯೊಂದು ಕಾರ್ಯಾಚರಣೆ ವೇಳೆ ಕಾಡಿಗೆ ಬಂದಿರುವುದೇ ಅರಣ್ಯ ಅಧಿಕಾರಿಗಳಿಗೆ ಮಾಹಿತಿ ಇರಲಿಲ್ಲ ಎಂಬ ವಾದವೂ ಇದೆ. ಇವೆಲ್ಲವೂ ಅಲ್ಲಿ-ಇಲ್ಲಿ ಕೇಳಿಬರುತ್ತಿರುವ ಮಾತುಗಳು. ಹಾಗೆಂದು ಇದಾವುದನ್ನೂ ನಿರ್ಲಕ್ಷಿಸುವ ಹಾಗಿಲ್ಲ.

ಕಳೆದ ಕೆಲವು ತಿಂಗಳ ಹಿಂದೆ ವೆಂಕಟೇಶ್ ಎಂಬ 67 ವರ್ಷದ ಆನೆ ಇಂಥದ್ದೇ ಕಾರ್ಯಾಚರಣೆ ವೇಳೆ ಬಲಿಯಾಗಿತ್ತು. ಇಲ್ಲಿಯು ನಿವೃತ್ತಿಯಾದ ಆನೆಯ ಬಳಕೆ ಕುರಿತು ಆಕ್ಷೇಪ ಕೇಳಿಬಂದಿತ್ತು. ಆದರೂ ಅರಣ್ಯ ಇಲಾಖೆ ಇದನ್ನು ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ. ಅದರಲ್ಲೂ ಅರ್ಜುನ ಕಾರ್ಯಾಚರಣೆಯಲ್ಲಿ ಅರಿವಳಿಕೆ ವೈದ್ಯರು, ಅರಣ್ಯ ಇಲಾಖೆ ಅಧಿಕಾರಿಗಳ ಲೋಪ ಇದೆ ಎನ್ನುವುದರಲ್ಲಿ ಅನುಮಾನ ಇಲ್ಲ. ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಿದಾಗಲೇ ಅರ್ಜುನನ ಸಾವಿಗೆ ನ್ಯಾಯ ಸಿಗುತ್ತದೆ.


ಇನ್ನೊಂದೆಡೆ, ರಾಜ್ಯದಲ್ಲಿ ಕಾಡಾನೆಗಳ ಹಾವಳಿ ನಿರಂತರವಾಗಿ ಹೆಚ್ಚುತ್ತಿದ್ದು, ಜ್ವಲಂತ ಸಮಸ್ಯೆಯಾಗಿ ಪರಿಣಮಿಸಿದೆ. ಈ ನಿಟ್ಟಿನಲ್ಲಿ ಆನೆ ಕಾರ್ಯಪಡೆಗಳನ್ನು ರಚಿಸಿ ಅವುಗಳ ಮೂಲಕ ಕಾರ್ಯಾಚರಣೆ ನಡೆಸಲಾಗುತ್ತಿದೆ. ಆದರೆ, ಈ ಕಾರ್ಯಪಡೆಯಲ್ಲೂ ಸಿಬ್ಬಂದಿ ಕೊರತೆ ಇರುವುದರಿಂದ ಕಾರ್ಯಾಚರಣೆ ಸಮರ್ಪಕವಾಗಿ ನಡೆಯುತ್ತಿಲ್ಲ ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ಮೊದಲು ಅರಣ್ಯ ಇಲಾಖೆಗೆ ಅಗತ್ಯ ಸಿಬ್ಬಂದಿ ವ್ಯವಸ್ಥೆ ಮಾಡುವ ಮೂಲಕ ಮೂಲ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ಚಿಂತಿಸಲೇಬೇಕು.

ವಿಜಯವಾಣಿ

ಸಂಪಾದಕೀಯ

# ಮಧ್ಯಮವರ್ಗದವರಿಗೆ ಹೊಡೆತ

ರಾಜ್ಯದಲ್ಲಿ ಭೀಕರ ಬರ ತಾಂಡವವಾಡುತ್ತಿದೆ. ಆಹಾರಧಾನ್ಯಗಳು ಸೇರಿದಂತೆ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರು ಹೈರಾಣಾಗಿದ್ದು, ಕುಟುಂಬದ ಬಜೆಟ್‌ನ್ನು ಸರಿದೂಗಿಸಲು ಪ್ರಯಾಸ ಪಡುತ್ತಿದ್ದಾರೆ. ಗ್ರಾಮೀಣ ಭಾಗದ ರೈತಾಪಿ ಜನರ ಬದುಕು ಇನ್ನೂ ಶೋಚನೀಯ. ಹೀಗೆ ಕಷ್ಟದ ದಿನಗಳ ಸಂದರ್ಭಗಳಲ್ಲಿ ಆಳುಗರು ಜನರಿಗೆ ನೆರವಾಗುವಂಥ, ಬೆಲೆಯೇರಿಕೆಯ ಹೊರೆಯನ್ನು ಕಡಿಮೆ ಮಾಡುವಂಥ ಕ್ರಮಗಳನ್ನು ಕೈಗೊಂಡು, ಒಂದಿಷ್ಟು ನಿರಾಳತೆಯನ್ನು ಮೂಡಿಸಬೇಕು. ಆದರೆ, ರಾಜ್ಯ ಸರ್ಕಾರ ಇದಕ್ಕೆ ತದ್ವಿರುದ್ಧವಾದ ಹೆಜ್ಜೆಯನ್ನು ಇರಿಸಿದ್ದು, ಬರದ ಸಂಕಷ್ಟದಲ್ಲೇ ಜನಸಾಮಾನ್ಯರಿಗೆ ಮತ್ತೊಂದು ಹೊಡೆತ ನೀಡಿದೆ. 2024ರ ಜನವರಿಯಿಂದಲೇ ಅನ್ವಯವಾಗುವಂತೆ ಮುದ್ರಾಂಕ ಶುಲ್ಕ (ಸ್ಟ್ಯಾಂಪ್ ಡ್ಯೂಟಿ) ಹೆಚ್ಚಳಕ್ಕೆ ತೀರ್ಮಾನ ಮಾಡಿದ್ದು, ಭೂಮಿಯ ಮಾರ್ಗಸೂಚಿ ಬೆಲೆ ಹೆಚ್ಚಳದ ಬೆನ್ನಲ್ಲೇ ಈ ಕ್ರಮಕ್ಕೆ ಮುಂದಾಗಿದೆ. ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲ ಅಧಿವೇಶನದ ಸಂದರ್ಭದಲ್ಲೇ ಮುದ್ರಾಂಕ ಕಾಯ್ದೆಗೆ ತಿದ್ದುಪಡಿ ತರಲು ಉದ್ದೇಶಿಸಿದೆ.



**ಗಾಯದ ಮೇಲೆ ಬರೆ ಎಳೆದ ಸರ್ಕಾರದ ಕ್ರಮ**

ಹಲವು ಉಚಿತ ಕೊಡುಗೆಗಳನ್ನು (ಗ್ಯಾರಂಟಿ) ಘೋಷಿಸಿರುವ ರಾಜ್ಯ ಸರ್ಕಾರ ಸಂಪನ್ಮೂಲ ಕ್ರೋಡೀಕರಣಕ್ಕಾಗಿ ಹೊಸ ದಾರಿಗಳನ್ನು ಶೋಧಿಸುತ್ತಿರುವುದು ಗೊತ್ತಿರುವಂಥದ್ದೇ. ಮನೆಗಳ ಬಾಡಿಗೆ ಕರಾರು, ಗುತ್ತಿಗೆ ಕರಾರು, ಬ್ಯಾಂಕ್ ಸಾಲದ ದಾಖಲೆಗಳು (ಡಿಟಿಡಿ), ಪವರ್ ಆಫ್ ಅಟಾರ್ನಿ, ಒಪ್ಪಂದಗಳು, ಪ್ರಮಾಣಪತ್ರಗಳಿಗೆ ಅನ್ವಯವಾಗುವಂತೆ ಮುದ್ರಾಂಕ ಶುಲ್ಕ ಹೆಚ್ಚಳವಾಗಲಿದೆ. ಇದರ ನೇರ ಪ್ರತಿಕೂಲ ಪರಿಣಾಮವು ಮಧ್ಯಮವರ್ಗದವರ ಮೇಲಾಗಲಿದೆ ಎಂಬುದರ ಬಗ್ಗೆ ಅನುಮಾನವಿಲ್ಲ.

ಮುದ್ರಾಂಕ ಶುಲ್ಕದಿಂದ ಪ್ರಸಕ್ತ ವಾರ್ಷಿಕ ಸರಾಸರಿ 2,027 ಕೋಟಿ ರೂಪಾಯಿ ಸಂಗ್ರಹವಾಗುತ್ತಿದೆ. ಈ ಮೊತ್ತವನ್ನು 5 ಸಾವಿರ ಕೋಟಿ ರೂ.ಗಳಿಗೆ ಹೆಚ್ಚಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಆರ್ಥಿಕ ಸಂಪನ್ಮೂಲ ಕ್ರೋಡೀಕರಣಕ್ಕೆ ಹಲವು ದಾರಿ ಶೋಧಿಸುವುದು ರಾಜ್ಯ ಸರ್ಕಾರಕ್ಕೆ ಅನಿವಾರ್ಯವೇನೋ ನಿಜ. ಆದರೆ, ಇಂಥ ಕ್ರಮಗಳು ಮಧ್ಯಮವರ್ಗದವರ ಮತ್ತು ಬಡಜನರ ಸಂಕಷ್ಟವನ್ನು ಹೆಚ್ಚಿಸುವಂತಿರಬಾರದು ಎಂಬ ಕಾಳಜಿ ಅಗತ್ಯ. ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಸಂಗ್ರಹವಾಗಬಹುದಾದರೂ, ಅದರಿಂದ ಶ್ರೀಸಾಮಾನ್ಯರು ಹಲವು ಸಮಸ್ಯೆ ಎದುರಿಸಬೇಕಾಗುತ್ತದೆ. ಮನೆಬಾಡಿಗೆಯಿಂದ ಹಿಡಿದು ಬ್ಯಾಂಕ್ ಸಾಲದ ದಾಖಲೆಗಳವರೆಗೂ ಹೆಚ್ಚು ಮುದ್ರಾಂಕ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಬರ, ಬೆಲೆಯೇರಿಕೆಯ ಪರಿಸ್ಥಿತಿಯನ್ನು ನಿರ್ವಹಿಸಬೇಕಾದ ಸರ್ಕಾರ ಈ ಹೊತ್ತಿನಲ್ಲಿ ಇಂಥ ಕ್ರಮ ಕೈಗೊಳ್ಳಬಾರದಿತ್ತು ಎಂಬುದು ಬಹುತೇಕ ಶ್ರೀಸಾಮಾನ್ಯರ ಅನಿಸಿಕೆ.

ಎಷ್ಟೋ ಇಲಾಖೆಗಳಲ್ಲಿ ವಿತ್ತೀಯ ಶಿಸ್ತು ಇಲ್ಲದ ಪರಿಣಾಮ ಅನವಶ್ಯಕವಾಗಿ ಹಣ ಪೋಲಾಗುತ್ತಿದೆ. ಅಂಥ ಅಪಸವ್ಯಗಳನ್ನು ಗುರುತಿಸಿ, ಸರ್ಕಾರಕ್ಕೆ ನಷ್ಟ ಆಗುತ್ತಿರುವ ಮೂಲಗಳನ್ನು ಪತ್ತೆ ಮಾಡಬೇಕು. ಅವುಗಳನ್ನು ಸರಿಪಡಿಸುವ ಮೂಲಕ ಸರ್ಕಾರ ಬೊಕ್ಕಸ ತುಂಬಿಸಿಕೊಳ್ಳಬೇಕೇ ಹೊರತು ಮುದ್ರಾಂಕ ಶುಲ್ಕ ಹೆಚ್ಚಳ ಅಥವಾ ಇನ್ನಿತರ ಅವಶ್ಯಕ ಸೌಲಭ್ಯಗಳ ದರ ಹೆಚ್ಚಳದಿಂದಲ್ಲ ಎಂಬ ವಾಸ್ತವವನ್ನು ಅರಿಯಬೇಕು. ಇನ್ನೂ ಕಾಲ ಮಿಂಚಿಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಸೂಕ್ತ ನಿರ್ಣಯಕ್ಕೆ ಬರಲಿ.

ಸಂಯುಕ್ತ ಕರ್ನಾಟಕ
ಸಂಪಾದಕೀಯ

# ಅನ್ನಕ್ಕಾಗಿ ಬಂದವರು ಮೆಕ್ಕೆಜೋಳದಲ್ಲೇ ಸಮಾಧಿ

ವಿಜಯಪುರ ಎಲ್ಲಿ ಬಿಹಾರದ ಸಮಸ್ತಿಪುರ ಎಲ್ಲಿ? ಅನ್ನಕ್ಕಾಗಿ ದುಡಿಯಲು ಬಂದವರ ಮೇಲೆ ಮೆಕ್ಕೆಜೋಳದ ರಾಶಿ ಕುಸಿದು 7 ಜನ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಜೆಸಿಬಿಯಿಂದ ಶವಗಳನ್ನು ಹೊರತೆಗೆಯಬೇಕಾಗಿ ಬಂದಿದೆ. ಇಲ್ಲಿ 16 ಘಟಕಗಳು ಕೆಲಸ ಮಾಡುತ್ತಿವೆ. ಒಟ್ಟು 160 ಜನ ಕಾರ್ಮಿಕರಿದ್ದಾರೆ. ಬಹುತೇಕ ಬಿಹಾರಿಗಳು. ಹಗಲು ರಾತ್ರಿ ದುಡಿಯುತ್ತಾರೆ. ಸ್ಥಳೀಯ ಕೂಲಿಕಾರರಿಗೆ ಹೆಚ್ಚಿನ ಕೂಲಿ ನೀಡಬೇಕು. ಅಲ್ಲದೆ ಸಂಜೆ 5 ಗಂಟೆಯಾಗುತ್ತಿದ್ದಂತೆ ಮನೆಗೆ ಧಾವಿಸುತ್ತಾರೆ. ಬಿಹಾರಿಗಳು ವಲಸೆ ಬಂದಿರುವುದರಿಂದ ಎಲ್ಲೂ ಹೋಗೋಲ್ಲ.ಸುತ್ತಮುತ್ತಜಿಲ್ಲೆಗಳಲ್ಲಿ ಬರುವ ಮೆಕ್ಕೆಜೋಳವನ್ನು ಇಲ್ಲಿಯ ವರ್ತಕರು ಖರೀದಿಸಿ ಸಂಸ್ಕರಣ ಮಾಡಿ ರೈಲುಮೂಲಕ ಉತ್ತರ ಭಾರತಕ್ಕೆ ಸಾಗಿಸುತ್ತಾರೆ. ಉಗಾದಿಯವರೆಗೆಈಸಂಸ್ಕರಣಘಟಕನಿರಂತರಕೆಲಸಮಾಡುತ್ತದೆ, ಕುಸಿದುಬಿದ್ದಘಟಕದುರಸ್ತಿಯಲ್ಲಿತ್ತು. ಕಾರ್ಮಿಕರು ದೂರು ನೀಡಿದ್ದರೂ ಮಾಲೀಕರು ಕಿವಿಗೊಟ್ಟಿರಲಿಲ್ಲ. ಒಮ್ಮೆ ಕೈಗಾರಿಕೆ ಆರಂಭವಾಯಿತು ಎಂದರೆ ಕಾರ್ಮಿಕ ಇಲಾಖೆಯಾಗಲಿ, ಕೈಗಾರಿಕೆ ಇಲಾಖೆಯಾಗಲಿ ಸ್ಥಳ ಪರಿಶೀಲನೆ ನಡೆಸಿ ಕಾರ್ಮಿಕರ ಕಷ್ಟ ಸುಖಗಳನ್ನು ವಿಚಾರಿಸುವುದಿಲ್ಲ. ಅದರಲ್ಲೂ ಬೇರೆ ರಾಜ್ಯಗಳಿಂದ ಬರುವ ಕಾರ್ಮಿಕರಾದರೆ ಮಾಲೀಕರಿಗೆ ಸಮಸ್ಯೆ ಇರುವುದಿಲ್ಲ. ಅವರು ಕಡಿಮೆ ಕೂಲಿಗೆ ಬಂದು ಹೆಚ್ಚು ಕಾಲ ದುಡಿಯುತ್ತಾರೆ. ಇದು ಎಲ್ಲ ಕಡೆ ನಡೆಯುತ್ತಿರುವ ದಂಧೆ. ವಲಸೆ ಕಾರ್ಮಿಕರಿಗೆ ಯಾವ ರೀತಿಯಲ್ಲೂ ರಕ್ಷಣೆ ಇರುವುದಿಲ್ಲ. ಇಂಥ ಕಾರ್ಮಿಕರನ್ನು ಹೊರ ರಾಜ್ಯಗಳಿಂದ ಕರೆದುಕೊಂಡು ಬರುವುದೇ ತಪ್ಪು. ವಲಸೆ ಬಂದ ಕಾರ್ಮಿಕರಿಗೆ ಸೂಕ್ತ ಸವಲತ್ತು ಕಲ್ಪಿಸಿಕೊಡುವುದು ಮಾಲೀಕರ ಕರ್ತವ್ಯ. ಅದನ್ನು ಪರಿಶೀಲಿಸುವುದು ಕಾರ್ಮಿಕ ಇಲಾಖೆ ಕೆಲಸ. ಈಗ ಯಾವುದೂ ನಡೆಯುತ್ತಿಲ್ಲ. ಮಾಲೀಕರಿಗೆ ಕಡಿಮೆ ವೆಚ್ಚದಲ್ಲಿ ಕೆಲಸವಾದರೆ ಸಾಕು. ಉತ್ತರ ಕರ್ನಾಟಕದಲ್ಲಿ ಹಲವು ಜಿಲ್ಲೆಗಳಲ್ಲಿ ಮೆಕ್ಕೆಜೋಳ ಹೆಚ್ಚಿನ ಪ್ರಮಾಣದಲ್ಲಿ ಬರುತ್ತದೆ. ಅದನ್ನು ಕಡಿಮೆ ದರದಲ್ಲಿ ಖರೀದಿ ಮಾಡಿ ಅವುಗಳನ್ನು ವರ್ಗೀಕರಿಸಿ ಚೀಲಗಳಿಗೆ ತುಂಬಿಸಿ ರೈಲು ಮಾರ್ಗದಲ್ಲಿ ಸಾಗಿಸುವುದು ಮೊದಲಿನಿಂದಲೂ ನಡೆದುಕೊಂಡು ಬಂದಿರುವ ಪದ್ಧತಿ.

**ವಿಜಯಪುರ ಜಿಲ್ಲೆ ಮೆಕ್ಕಜೋಳದ ಕಣಜ. ಇದರ ಸಂಸ್ಕರಣ ಘಟಕಗಳು ಹಗಲು ಇರುಳು ಕೆಲಸ ಮಾಡುತ್ತವೆ. ಇಲ್ಲಿ ಕೆಲಸ ಮಾಡುವವರ ರಕ್ಷಣೆಯ ಬಗ್ಗೆ ಕಾರ್ಮಿಕ ಇಲಾಖೆ ತಲೆಕೆಡಿಸಿಕೊಳ್ಳುತ್ತಿಲ್ಲ. ಕಾರ್ಮಿಕರ ಕಲ್ಯಾಣ ಯೋಜನೆ ಪುಸ್ತಕದಲ್ಲೇ ಉಳಿದಿದೆ.**

ಹಿಂದುಳಿದ ಪ್ರದೇಶದಲ್ಲಿ ಸಂಸ್ಕರಣ ಘಟಕಗಳನ್ನು ಸ್ಥಾಪಿಸಿದರೆ ಅಲ್ಲಿಯ ಆರ್ಥಿಕ ಅಭಿವೃದ್ಧಿಯಾಗುತ್ತದೆ ಎಂದು ಸರ್ಕಾರ ಹಲವು ರಿಯಾಯಿತಿಗಳನ್ನು ನೀಡುತ್ತದೆ. ಯಾರು ಎಲ್ಲಿ ಬೇಕಾದರೂ ಉದ್ಯಮ ಆರಂಭಿಸಬಹುದು ಹಾಗೂ ದುಡಿಯಬಹುದು ಎಂದು ಮೂಲಭೂತ ಹಕ್ಕು ಹೇಳುತ್ತದೆ ಎಂಬುದು ನಿಜವಾದರೂ ಸ್ಥಳೀಯರ ಪಾಲ್ಗೊಳ್ಳುವಿಕೆ ಇದ್ದರೆ ಒಳಿತು. ವಿಜಯಪುರದಲ್ಲಿ ಈಗ ರಸ್ತೆ ಮತ್ತು ರೈಲು ಸಂಪರ್ಕ ಉತ್ತಮಗೊಂಡಿದೆ.

ಕಡಿಮೆ ಬೆಲೆಗೆ ಖರೀದಿ ಮಾಡುವ ಮಧ್ಯವರ್ತಿಗಳು ಸಂಸ್ಕರಣ ಘಟಕ ಸ್ಥಾಪಿಸಿ ಅದರ ಮೂಲಕ ಸಿದ್ಧಪಡಿಸಿದ ಆಹಾರ ಧಾನ್ಯಗಳನ್ನು ಸಾಗಿಸುತ್ತಿದ್ದಾರೆ. ಇದರಿಂದ ರೈತರಿಗೆ ಹಾಗೂ ಕಾರ್ಮಿಕರಿಗೆ ಯಾವ ಲಾಭವೂ ಇಲ್ಲ. ಮಧ್ಯವರ್ತಿಗಳಿಗೆ ಒಳ್ಳೆಯ ಆದಾಯ. ಇದಕ್ಕೆ ಕೊನೆಹಾಡಬೇಕು. ರೈತರು ಮತ್ತು ಕಾರ್ಮಿಕರ ಶೋಷಣೆ ನಿಲ್ಲಬೇಕು. ರೈತರಿಗೆ ಉತ್ತಮ ಬೆಲೆ ಸಿಗಬೇಕು. ಕಾರ್ಮಿಕರಿಗೆ ಉತ್ತಮ ಕೂಲಿಸಿಗಬೇಕು.ಈಗ ಎರಡೂಇಲ್ಲ. ಆಹಾರ ಧಾನ್ಯಗಳ ಸಂಸ್ಕರಣ ರೈತರ ಕೈಯಲ್ಲೇ ಉಳಿದರೆ ಅವರ ಆದಾಯದ ಮೂಲ ಅಧಿಕಗೊಳ್ಳುತ್ತದೆ. ಒಂದೆ ಸಹಕಾರಿ ರಂಗದಲ್ಲಿ ಹೆಚ್ಚು ಪ್ರಯೋಗಗಳು ನಡೆದಿದ್ದವು.

ಹೊಸ ಆರ್ಥಿಕನೀತಿ ಬಂದ ಮೇಲೆ ಸಹಕಾರಿ ಕ್ಷೇತ್ರ ಹಿಂದಕ್ಕೆ ಸರಿಯಿತು. ಸರ್ಕಾರಿ- ಖಾಸಗಿ ರಂಗದ ನಡುವೆ ಸಹಕಾರಿ ರಂಗ ಇತ್ತು. ಈಗ ಇದು ಕಡಿಮೆಯಾಗಿದೆ. ಜನ ಸಾಮಾನ್ಯರು ಬಳಸುವ ಅಗತ್ಯ ವಸ್ತುಗಳ ಬೆಲೆ ಮಾತ್ರ ಏರಿಕೆಕಂಡಿದೆ. ವಿಜಯಪುರದ ಕಾರ್ಮಿಕರ ದಾರುಣ ಸಾವು ಇತಿಹಾಸದ ಗರ್ಭದಲ್ಲಿ ಸಮಾಧಿಯಾಗಿ ಹೋಗುತ್ತದೆ.■

CENTRAL UNIVERSITY OF KARNATAKA

**Any Feedback**

**Contact Us**

# Central Library

08477-226717

librarian@cuk.ac.in

http://cuklibrary.ac.in/index.html

**Central University of Karnataka, Kalaburagi-585367,India**